ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME-13 ಸಂಪುಟ:13 | ISSUE- ಸಂಚಿಕೆ: 07 | PAGE- ಪುಟ 8 | ಶನಿವಾರ 08.02.2025 | RS.ಬೆಲೆ 2/–

# ಸಿಎಂ ಸಿದ್ಧರಾಮಯ್ಯ ನಿರಾಳ

## ಮುಡಾ ತನಿಖೆ ಸಿಬಿಐಗೆ ವಹಿಸುವ ಅರ್ಜಿ ವಜಾಗೊಳಿಸಿದ ಹೈಕೋರ್ಟ್

ಮಲ್ಲಮ್ಮ ನುಡಿ ವಾರ್ತೆ
ಬೆಂಗಳೂರು:ಫೆ.7:ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಕೋರಿ ಸಲ್ಲಿಸಲಾದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ಶುಕ್ರವಾರ ತಿರಸ್ಕರಿಸಿದೆ. ಈ ಪ್ರಕರಣದಲ್ಲಿ ಸದ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಿಗ್ ರಿಲೀಫ್ ಸಿಕ್ಕಂತಾಗಿದೆ.

ದೂರುದಾರರಾದ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ್ದ ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠ ತೀರ್ಪು ಕಾಯ್ದಿರಿಸಿತ್ತು. ಇದೀಗ ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರು ಶುಕ್ರವಾರ ತೀರ್ಪು ಪ್ರಕಟಿಸಿದ್ದಾರೆ.

ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವರು ರಾಜ್ಯದ ಇಲಾಖೆಗಳ ಮೇಲೆ, ವಿಶೇಷವಾಗಿ ರಾಜ್ಯದ ತನಿಖಾ ಸಂಸ್ಥೆಗಳಾದ ಪೊಲೀಸ್ ಅಧಿಕಾರಿಗಳು ಮತ್ತು ಕರ್ನಾಟಕ ಲೋಕಾಯುಕ್ತ ಪೊಲೀಸರ ಮೇಲೆ ಅಧಿಕಾರ ಮತ್ತು ಪ್ರಭಾವವನ್ನು ಹೊಂದಿರುವುದರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ ಎಂದು ಸ್ನೇಹಮಯಿ ಕೃಷ್ಣ ಅವರು ತಮ್ಮ ಅರ್ಜಿಯಲ್ಲಿ ಪ್ರತಿಪಾದಿಸಿದ್ದರು.

ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರು, ಲೋಕಾಯುಕ್ತ ಸಂಸ್ಥೆಯು ಸ್ವತಂತ್ರ ತನಿಖಾ ಸಂಸ್ಥೆಯಾಗಿದೆ. ಲೋಕಾಯುಕ್ತ ನಡೆಸಿದ ತನಿಖೆಯು ಪಕ್ಷಪಾತ, ಲೋಪದೋಷ ಅಥವಾ ಕಳಪೆಯಾಗಿದೆ ಎಂಬುದಕ್ಕೆ ಯಾವುದೇ ದಾಖಲೆಗಳಿಲ್ಲ. ಹೀಗಾಗಿ, ಈ ಪ್ರಕರಣವನ್ನು ಹೆಚ್ಚಿನ ತನಿಖೆ ಅಥವಾ ಮರು ತನಿಖೆಗೆ ಸಿಬಿಐಗೆ



ವರ್ಗಾಯಿಸಲು ಈ ನ್ಯಾಯಾಲಯ ಸೂಚಿಸುವುದಿಲ್ಲ. ಈ ಅರ್ಜಿಯನ್ನು ವಜಾಗೊಳಿಸಲಾಗಿದೆ' ಎಂದು ಹೇಳಿದರು.

ಲೋಕಾಯುಕ್ತ ಕಚೇರಿಯು ಪ್ರಶ್ನಾರ್ಹ ಸ್ವಾತಂತ್ರ್ಯವನ್ನು ಹೊಂದಿದೆಯೇ; ಯಾವ ಸಂದರ್ಭಗಳಲ್ಲಿ ನ್ಯಾಯಾಲಯಗಳು ತನಿಖೆ, ಹೆಚ್ಚಿನ ತನಿಖೆ, ಮರುತನಿಖೆಯನ್ನು ಸಿಬಿಐಗೆ ವಹಿಸಿವೆ ಮತ್ತು ಯಾವ ಪ್ರಕರಣಗಳಲ್ಲಿ ನ್ಯಾಯಾಲಯಗಳು ಸಿಬಿಐಗೆ ತನಿಖೆಯನ್ನು ಉಲ್ಲೇಖಿಸಲು ನಿರಾಕರಿಸಿವೆ ಮತ್ತು ಲೋಕಾಯುಕ್ತ ತನಿಖೆಯ ಸಮಯದಲ್ಲಿ ಸಂಗ್ರಹಿಸಿದ ಸಾಕ್ಷ್ಯಗಳು ಅಥವಾ ಮಾಹಿತಿಯು ಪ್ರಕರಣವನ್ನು ಹೆಚ್ಚಿನ ತನಿಖೆಗಾಗಿ ಸಿಬಿಐಗೆ ವರ್ಗಾಯಿಸುವುದನ್ನು ಸಮರ್ಥಿಸುತ್ತದೆಯೇ ಎಂಬ ಮೂರು ಪ್ರಶ್ನೆಗಳನ್ನು ನ್ಯಾಯಾಧೀಶರು ಪರಿಗಣಿಸಿದ್ದಾರೆ.

'ಲೋಕಾಯುಕ್ತ ಕಚೇರಿಯು ಸ್ವತಂತ್ರ ಮತ್ತು ಬಾಹ್ಯ ಒತ್ತಡ ಅಥವಾ ಪ್ರಭಾವಗಳಿಂದ ಮುಕ್ತವಾಗಿದೆ. ಲೋಕಾಯುಕ್ತ ಸಂಸ್ಥೆಯು ಯಾವುದೇ ಅನಗತ್ಯ ಹಸ್ತಕ್ಷೇಪ ಅಥವಾ ಪಕ್ಷಪಾತವಿಲ್ಲದೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಸುಪ್ರೀಂ ಕೋರ್ಟ್ ಮತ್ತು ಕೆಳ ನ್ಯಾಯಾಲಯದ ವಿಭಾಗೀಯ ಪೀಠವು ಈಗಾಗಲೇ ಗುರುತಿಸಿದೆ' ಎಂದು ಹೇಳಿದರು.


ಸಿಬಿಐ ತನಿಖೆಗೆ ಒಪ್ಪಿಸಲು ಈ ಹಿಂದೆ ಸುಪ್ರೀಂ ಕೋರ್ಟ್ ಇತರ ಪ್ರಕರಣಗಳಲ್ಲಿ ಸೂಚಿಸಿರುವಂತಹ ಸಮಸ್ಯೆಗಳು ಈ ಪ್ರಕರಣದಲ್ಲಿ ಇಲ್ಲ. ಈ ಪ್ರಕರಣವನ್ನು ಸಿಬಿಐಗೆ ಉಲ್ಲೇಖಿಸುವುದು ಈ ಪ್ರಕರಣದಲ್ಲಿ ಗ್ರಹಿಸಿದ ಸಮಸ್ಯೆಗೆ ಪರಿಹಾರವಲ್ಲ. ಎಲ್ಲಾ ರೀತಿಯ ಕಾಳಜಿಗಳಿಗೆ ಇದುವೇ ಚಿಕಿತ್ಸೆ ಅಲ್ಲ ಎಂದು ಸೂಚಿಸುತ್ತದೆ ಎಂದು ನಾಗಪ್ರಸನ್ನ ಹೇಳಿದರು.

ತೀರ್ಪಿಗೆ ಪ್ರತಿಕ್ರಿಯಿಸಿದ ಅರ್ಜಿದಾರರಾದ ಸ್ನೇಹಮಯಿ ಕೃಷ್ಣ, ಇದು ತಾತ್ಕಾಲಿಕ ಹಿನ್ನಡೆಯಾಗಿದೆ. ನ್ಯಾಯಾಲಯದ ಆದೇಶ ಪ್ರತಿ ಲಭ್ಯವಾದ ನಂತರ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೊದಲ ಆರೋಪಿ ಎಂದು ಹೆಸರಿಸಲಾಗಿದ್ದು, ಅವರ ಪತ್ನಿ ಬಿಎಂ ಪಾರ್ವತಿ ಅವರನ್ನು ಎರಡನೇ ಆರೋಪಿಯನ್ನಾಗಿ ಮಾಡಲಾಗಿದೆ.

ಮೈಸೂರಿನ ಕೆಸರೆ ಗ್ರಾಮದಲ್ಲಿ ಸ್ವಾಧೀನಪಡಿಸಿಕೊಂಡ ಪಾರ್ವತಿ ಅವರ ಮೂರು ಎಕರೆ 16 ಗುಂಟೆ ಭೂಮಿಗೆ ಬದಲಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಪ್ರಭಾವ ಬಳಸಿ ಮೈಸೂರಿನಲ್ಲಿ 14 ನಿವೇಶನಗಳನ್ನು ಪಡೆದ ಆರೋಪವಿದೆ. ಲೋಕಾಯುಕ್ತ ಪೊಲೀಸರಲ್ಲದೆ, ಜಾರಿ ನಿರ್ದೇಶನಾಲಯವೂ ಈ ಪ್ರಕರಣದಲ್ಲಿ ತನಿಖೆ ನಡೆಸುತ್ತಿದೆ.

## ಗೋಗಿಪೇಟ್ ನೂತನ ಗ್ರಾಪಂ ಕಚೇರಿ: ಸಚಿವ ದರ್ಶನಾಪುರ



ಮಲ್ಲಮ್ಮ ನುಡಿ ವಾರ್ತೆ
ಶಹಾಪುರ:ಫೆ.7:ತಾಲೂಕಿನ ಗೋಗಿಪೇಟ್‌ಗೆ ನೂತನವಾಗಿ ಗ್ರಾಮ ಪಂಚಾಯತಿ ಕಚೇರಿ ನಿರ್ಮಾಣಕ್ಕೆ ಗೃಹ ಇಲಾಖೆಯಿಂದ ಅನುಮತಿ ಪಡೆಯಲಾಗಿದ್ದು, ಇದರಿಂದಾಗಿ ಬಹುದಿನಗಳ ಈ ಎರಡೂ ಗ್ರಾಪಂಗಳ ಆಡಳಿತಕ್ಕಾಗಿರುವ ಒಂದೇ ಕಟ್ಟಡದ ತೊಂದರೆಯನ್ನು ನಿವಾರಿಸಿದಂತಾಗಲಿದೆ ಎಂದು ಸಣ್ಣ ಕೈಗಾರಿಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ತಿಳಿಸಿದರು.

ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿ, ಹಲವಾರು ದಶಕಗಳಿಂದ ತಾಲೂಕಿನ ಗೋಗಿಕೋನಾ ಮತ್ತು ಗೋಗಿಪೇಟ್ ಗ್ರಾಪಂಚಾಯತಿಗಳು ಏಕೈಕ ಕಟ್ಟಡದಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದವು.

ಆಡಳಿತಾತ್ಮಕ ತೊಂದರೆ ಅನುಭವಿಸುವಂತಾಗಿತ್ತು. ಪರಸ್ಥಿತಿಯನ್ನು ಅರಿತು ಗೋಗಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸ್ಥಳ ಲಭ್ಯವಿರುವುದರ ಕುರಿತು ಗೃಹ ಇಲಾಖೆಗೆ ಪತ್ರ ಬರೆದು ಗ್ರಾಪಂ ಕಚೇರಿಗಾಗಿ ಸ್ಥಳಾವಕಾಶ ಒದಗಿಸಬೇಕೆಂದು ಕೋರಲಾಗಿತ್ತು. ಅದಕ್ಕೆ ಗೃಹ ಇಲಾಖೆ ಅಸ್ತು ಎಂದು ಆದೇಶ ಹೊರಡಿಸಿ ಪೊಲೀಸ್ ಠಾಣೆಯಲ್ಲಿರುವ ಸುಮಾರು 90*80 ಅಡಿ ಅಳತೆಯ ಜಾಗವನ್ನು ಗೋಗಿಪೇಟ್ ಗ್ರಾಪಂ ಕಚೇರಿ ಕಟ್ಟಡ ನಿರ್ಮಿಸಿಕೊಳ್ಳಲು ಒದಗಿಸಿದೆ. ಶೀಘ್ರದಲ್ಲಿಯೇ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿವ ಮೂಲಕ ಗ್ರಾಮಸ್ಥರಿಗೆ ಹಾಗೂ ಗ್ರಾಪಂ ಆಡಳಿತಕ್ಕೆ ಸುವ್ಯವಸ್ಥೆ ಕಲ್ಪಿಸಿದಂತಾಗಲಿದೆ ಎಂದು ತಿಳಿಸಿದ್ದಾರೆ.

## ದೇಶದಲ್ಲೇ ವೀರ ಸನ್ಯಾಸಿಗಳಲ್ಲಿ ಶ್ರೇಷ್ಠ ವ್ಯಕ್ತಿ ಶ್ರೀ ಸ್ವಾಮಿ ವಿವೇಕಾನಂದರು: ಡಾ.ಚಂದ್ರಶೇಖರ ಪಾಟೀಲ



ಮಲ್ಲಮ್ಮ ನುಡಿ ವಾರ್ತೆ
ಹುಮ್ನಾಬಾದ. ಫೆ.7: ಇಡೀ ಭಾರತ ದೇಶದಲ್ಲೇ ವೀರ ಸನ್ಯಾಸಿಗಳಲ್ಲೇ ಶ್ರೇಷ್ಠ ವ್ಯಕ್ತಿ ಸ್ವಾಮಿ ವಿವೇಕಾನಂದರು ಎಂದು ಇತಿಹಾಸದ ಪುಟಗಳು ಹೇಳುತ್ತವೆ ಎಂದು ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ ಅವರು ಇಂದಿಲ್ಲಿ ಹೇಳಿದರು.

ಅವರು ಶುಕ್ರವಾರ ಪಟ್ಟಣದ ಹೊರವಲಯದ ಶ್ರೀ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆಯಲ್ಲಿ ಶ್ರೀ ವಿವೇಕಾನಂದರ 163ನೇ ಜಯಂತಿ ನಿಮಿತ್ತ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಈ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಸಂಸ್ಥೆಯನ್ನು ಎಂದು ಮರೆಯಬಾರದು. ನಾನು ಈ ಶಾಲೆಯಲ್ಲಿ ಓದಿ ಪಾಸಾದೆ ಮುಂದೆ ಡಾಕ್ಟರ ಕೋರ್ಸ್ ಓದಿ ಪಾಸಾದೆ ಈವಾಗ ಎರಡು ಭಾರಿ ವಿಧಾನ ಪರಿಷತ್ ಸದಸ್ಯನಾಗಿ ಆಯ್ಕೆಯಾದೆ ಎಂದು ಹೇಳಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ರಮೇಶ್ ಗಾದಾ ಅವರು ಸ್ವಾಗತ ಭಾಷಣ ಮಾಡಿದರು. ಸಂಸ್ಥೆಯ ಕಾರ್ಯದರ್ಶಿ ಅನೀಲಕುಮಾರ ಪಲ್ಲರಿ ಅವರು ಪ್ರಾಸ್ತಾವಿಕ ನುಡಿ ಹೇಳಿದರು. ವೇದಿಕೆಯಲ್ಲಿ ಬಸವಕಲ್ಯಾಣ ತಹಶಿಲ್ದಾರರಾದ ಶ್ರೀ ದತ್ತಾತ್ರೇಯ ಗಾದಾ ಹಾಗೂ ಹಿರಿಯ ನಾಗರಿಕ ಮಾಣಿಕಪ್ಪಾ ಗಾದಾ, ನಾಗರಾಜ ವಾಸಗಿ. ನಾಗರಾಜ ಜಾಜಿ. ಸೇರಿದಂತೆ ಅನೇಕರು ಹಾಜರಿದ್ದರು.

## ಗಾಯಾಳುವಿಗೆ ಚಿಕಿತ್ಸೆ: ಮಾನವೀಯತೆ ಮೆರೆದ ಸಚಿವ ಸಂತೋಷ ಲಾಡ

ಮಲ್ಲಮ್ಮ ನುಡಿ ವಾರ್ತೆ
ಬಾಗಲಕೋಟೆ,ಫೆ.7–ಕಾರ್ಮಿಕ ಸಚಿವ ಸಂತೋಷ ಲಾಡ ಅಪಘಾತವೊಂದರ ಗಾಯಾಳುವನ್ನು ತಮ್ಮ ಕಾರಿನಲ್ಲೇ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ ಮಾನವೀಯತೆ ಮೆರೆದಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಲೋಕಾಪುರ ಬಳಿ ಶುಕ್ರವಾರ ಟ್ರ್ಯಾಕ್ಟರ್ ಹಿಂಬದಿಯಿಂದ ಹೊರಟಿದ್ದ ಬೈಕ್ ಸವಾರ ಆಯತಪ್ಪಿಬಿದ್ದು ಗಾಯಗೊಂಡಿದ್ದ. ಅದೇ ಸಮಯಕ್ಕೆ ಸಚಿವ ಸಂತೋಷ ಲಾಡ ಅವರು ಜಮಖಂಡಿಯಿಂದ ಬರುತ್ತಿದ್ದು, ಬೈಕ್ ಸವಾರನರಳುತ್ತಿರುವುದನ್ನು ಕಂಡು ಕಾರು ನಿಲ್ಲಿಸಿ ತತಕ್ಷಣ ಗಾಯಾಳು ಸತೀಶ ವೆಂಕಪ್ಪ ಮಾದರ ಅವನನ್ನು ತಮ್ಮ




ಕಾರಿನಲ್ಲೇ ಲೋಕಾಪೂರ ಸರಕಾರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು.


ಬೈಕ್ ಸವಾರ ಸತೀಶ ಮೊಳಕಾಲಿಗೆ ತೀವ್ರ ಗಾಯವಾಗಿದ್ದರಿಂದ ಲೋಕಾಪೂರ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ ಸಚಿವರು, ನಂತರ ಅಂಬುಲನ್ಸ್ ತರಿಸಿ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದರು.

ಸಚಿವರ ಈ ಮಾನವೀಯ ಕಾರ್ಯಕ್ಕೆ ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗಿದ್ದು, ಸಚಿವರೂ ಸಹ ಲೋಕಾಪೂರ ಆಸ್ಪತ್ರೆಯ ಸಿಬ್ಬಂದಿಯ ಮುತುವರ್ಜಿ ಕಾರ್ಯ ಮೆಚ್ಚಿ ನಿಮ್ಮ ಸೇವೆಗೆ ಸೆಲ್ಯೂಟ್ ಎಂದು ಹೇಳಿದರು. ಗಾಯಾಳುವಿನ ಪಾಲಕರು, ಸಂಬಂಧಿಗಳು ಸಚಿವರಿಗೆ ಕೃತಜ್ಞತೆ ಸಲ್ಲಿಸಿದರು.

## ಶೀಘ್ರ ಏಕರೂಪದ ಟೋಲ್ ನೀತಿ:ಗಡ್ಕರಿ

ಮಲ್ಲಮ್ಮ ನುಡಿ ವಾರ್ತೆ
ನವದೆಹಲಿ:ಫೆ.7:ಸದ್ಯ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳಿಗೆ ವಿಧಿಸುತ್ತಿರುವ ಟೋಲ್‌ನಲ್ಲಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಶೀಘ್ರದಲ್ಲೇ ಪ್ರಯಾಣಿಕರಿಗೆ ಗುಡ್ ನ್ಯೂಸ್ ನೀಡಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಶುಕ್ರವಾರ ಹೇಳಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಬಳಕೆದಾರರಿಗೆ ಅನುಕೂಲವಾಗುವಂತೆ ಸರ್ಕಾರ ಏಕರೂಪದ ಟೋಲ್ ನೀತಿಯನ್ನು ರೂಪಿಸುತ್ತಿದೆ. ನಮ್ಮ ಸಂಶೋಧನೆ ಪೂರ್ಣಗೊಂಡಿದೆ ಮತ್ತು ಯೋಜನೆಯನ್ನು ಶೀಘ್ರದಲ್ಲೇ ಬಹಿರಂಗಪಡಿಸಲಾಗುವುದು ಗಡ್ಕರಿ ತಿಳಿಸಿದ್ದಾರೆ. ರಾಷ್ಟ್ರೀಯ



ಹೆದ್ದಾರಿಗಳಲ್ಲಿ ಜಾಗತಿಕ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್ (ಜಿಎನ್‌ಎಸ್‌ಎಸ್) ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆಯನ್ನು ಹೊರತರಲು ಸರ್ಕಾರ ಕೆಲಸ ಮಾಡುತ್ತಿದೆ. ಇದು ಟೋಲ್ ಸಂಗ್ರಹಿಸಲು ಸ್ಥಾಪಿಸಲಾದ ಅಡೆತಡೆಗಳ ಅಗತ್ಯವನ್ನು ನಿವಾರಿಸುತ್ತದೆ. ಇದು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಗಮ

(2ನೇ ಪುಟ ನೋಡಿ)

## ಪಕ್ಷ ಜವಾಬ್ದಾರಿ ಹೊರಿಸಿದರೆ ನಿಭಾಯಿಸುವ ಶಕ್ತಿಯಿದೆ

# ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ:ನಿರಾಣಿ

ಮಲ್ಲಮ್ಮ ನುಡಿ ವಾರ್ತೆ
ಬಾಗಲಕೋಟೆ,ಫೆ.7:ನಾನು ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷಸ್ಥಾನದ ಆಕಾಂಕ್ಷಿಯಲ್ಲ. ಪಕ್ಷದ ಹೈಕಮಾಂಡ ಅವಕಾಶ ನೀಡಿದರೆ ಅಧ್ಯಕ್ಷ ಸ್ಥಾನವನ್ನು ಸಮರ್ಥವಾಗಿ ನಿಭಾಯಿಸುವ ಶಕ್ತಿ ನನ್ನಲ್ಲಿದೆ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಹೇಳಿದ್ದಾರೆ.

ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನೇನು ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಂತೂ ಅಲ್ಲ. ಪಕ್ಷ ಜವಾಬ್ದಾರಿ ಹೊರಿಸಿದರೆ ನಿಭಾಯಿಸುವೆ ಎಂದರು.

ಬಿಜೆಪಿಯ ಅಸಮಾಧಾನದ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ನಿರಾಣಿ, ಈಗ ನಮ್ಮೊಳಗೆ ನಾವು ಅಸಮಾಧಾನಿಗಳಾಗುವುದಕ್ಕಿಂತ ಆಡಳಿತಾರೂಢ ಕಾಂಗ್ರೆಸ್ ಭ್ರಷ್ಟಾಚಾರದ ವಿರುದ್ಧ ಹೋರಾಡುವುದು ಪ್ರಮುಖವಾಗಿದೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೆ ಅನುಭವದ ಕೊರತೆಯಿದೆ. ಪಕ್ಷದಲ್ಲಿ ಈಗ ಬಣಗಳಾಗಿವೆ. ಇದನ್ನೆಲ್ಲ ಸರಿಪಡಿಸುವ ಕೆಲಸವಾಗಬೇಕಿದೆ. ವಿಜಯೇಂದ್ರ ಇದನ್ನು ಸೂಕ್ಷ್ಮವಾಗಿ ಗಮನಿಸಿ



ಒಂದೆಡೆ ಕುಳಿತು ಎಲ್ಲರೊಂದಿಗೂ ಮಾತನಾಡಿ ಸರಿಪಡಿಸಬೇಕು. ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋದಲ್ಲಿ ಎಲ್ಲವೂ ಬಗೆಹರಿಯುವುದು ಎಂದು ಹೇಳಿದ ಮುರುಗೇಶ ನಿರಾಣಿ, ನನಗೆ ಯಾವ ಬಣವೂ ಇಲ್ಲ. ಯಾರ ಬಗ್ಗೆ ವಿರೋಧವೂ ಇಲ್ಲ, ದ್ವೇಷವು ಇಲ್ಲ ಎಂದು ಹೇಳಿದರು.

ಬಸನಗೌಡ ಪಾಟೀಲ ಯತ್ನಾಳ ಪಕ್ಷದ ರಾಜ್ಯಾಧ್ಯಕ್ಷರಾದರೇ ಹೇಗೆ ಎಂಬ ಪ್ರಶ್ನೆಗೆ ರಾಜಕಾರಣದಲ್ಲಿ ಯಾರೂ ಶಾಶ್ವತ ಮಿತ್ರರು ಅಲ್ಲ, ಶತೃಗಳೂ ಅಲ್ಲ. ಹೀಗಾಗಿ ನಾನು ಯಾರ ಬಗ್ಗೆಯೂ ವೈರತ್ವದ ಭಾವನೆ ಇಟ್ಟುಕೊಂಡಿಲ್ಲ. ಯಾರೇ ಅಧ್ಯಕ್ಷರಾದರೂ ಅದನ್ನು ಒಪ್ಪಿಕೊಳ್ಳುತ್ತೇನೆ. ಯಾರು ಕರೆದರೂ ಹೋಗುತ್ತೇನೆ ಎಂದ ಮುರುಗೇಶ ನಿರಾಣಿ, ಅವರು ಒಂದು ಹೆಜ್ಜೆ ಮುಂದಿಟ್ಟರೆ ನಾನು ಹತ್ತು ಹೆಜ್ಜೆ ಮುಂದೆ ಬರುತ್ತೇನೆ ಎಂದು ಮಾರ್ಮಿಕವಾಗಿ ಹೇಳಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬೀಳಗಿ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ನಮ್ಮ ಸರ್ಕಾರದಲ್ಲಿ 400 ದೇವಸ್ಥಾನಗಳಿಗೆ ಅನುದಾನ ಬಿಡುಗಡೆಗೊಳಿಸಿದ್ದೆ, ಕೆಲವು ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಚುನಾವಣೆ ಬಂದ ಹಿನ್ನಲೆಯಲ್ಲಿ ಹಲವು ಕಾಮಗಾರಿ ತಟಸ್ಥಗೊಂಡವು. ಆದರೆ ಈಗಿನ ಶಾಸಕ ಜೆ.ಟಿ.ಪಾಟೀಲ ಯಾವುದೇ ಅನುದಾನ ತಂದಿಲ್ಲ. ನಾನು

(2ನೇ ಪುಟ ನೋಡಿ)

## ಪ್ರಧಾನಮಂತ್ರಿ ಅವಾಸ್ ಯೋಜನೆ (ಗ್ರಾಮೀಣ):ಈವರೆಗೆ 2.69 ಕೋಟಿ ಮನೆಗಳ ನಿರ್ಮಾಣ ಪೂರ್ಣ

ಮಲ್ಲಮ್ಮ ನುಡಿ ವಾರ್ತೆ
ನವದೆಹಲಿ:ಫೆ.7:ಗ್ರಾಮೀಣ ಪ್ರದೇಶದಲ್ಲಿ 'ಎಲ್ಲರಿಗೂ ಸೂರು' ಒದಗಿಸುವ ಉದ್ದೇಶ ಸಾಧನೆಗಾಗಿ ಫೆಬ್ರವರಿ 2 ರವರೆಗೂ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹಂಚಿಕೆಯಾಗಿದ್ದ 3.79 ಕೋಟಿ ಮನೆಗಳ ಪೈಕಿ 3.34 ಕೋಟಿ ಮನೆಗಳು ಮಂಜೂರು ಆಗಿದ್ದು, ಇಲ್ಲಿಯವರೆಗೂ 2.69 ಕೋಟಿ ಮನೆಗಳ ನಿರ್ಮಾಣ ಸಂಪೂರ್ಣವಾಗಿದೆ ಎಂದು ಸರ್ಕಾರ ಶುಕ್ರವಾರ ತಿಳಿಸಿದೆ. ಗ್ರಾಮೀಣ ಅಭಿವೃದ್ಧಿ ಸಚಿವಾಲಯ ಏಪ್ರಿಲ್ 1, 2016 ರಿಂದ ಅನುಷ್ಠಾನಗೊಳಿಸಿದ ಪ್ರಧಾನಮಂತ್ರಿ ಅವಾಸ್ ಯೋಜನೆ (ಗ್ರಾಮೀಣ) ಅಡಿಯಲ್ಲಿ 2.95 ಕೋಟಿ ಅರ್ಹ ಗ್ರಾಮೀಣ ವಸತಿ ರಹಿತರಿಗೆ ಆರ್ಥಿಕ ನೆರವು ಒದಗಿಸಲಾಗಿದೆ.

ಮಾರ್ಚ್ 31, 2024 ರಂತೆ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಅರ್ಹ ಫಲಾನುಭವಿಗಳಿಗೆ ಎಲ್ಲಾ ಮನೆಗಳನ್ನು ಮಂಜೂರು ಮಾಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವ ಡಾ.ಚಂದ್ರಶೇಖರ್ ಪೆಮ್ಮಸಾನಿ ರಾಜ್ಯಸಭೆಯಲ್ಲಿ ತಿಳಿಸಿದ್ದಾರೆ. 2024–25 ರಿಂದ 2028–29 ರ ಅವಧಿಯಲ್ಲಿ ಹೆಚ್ಚುವರಿ 2 ಕೋಟಿ ಮನೆಗಳ ನಿರ್ಮಾಣಕ್ಕಾಗಿ ಪ್ರಧಾನ ಮಂತ್ರಿ ಆವಾಸ್ ಯೋಜನೆ–ಗ್ರಾಮೀಣ (ಕಒಂಜ–ಉ) ಅನುಷ್ಠಾನದ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

2024–25ರ ಅವಧಿಯಲ್ಲಿ ಅಸ್ಸಾಂ, ಬಿಹಾರ, ಛತ್ತೀಸ್‌ಗಢ, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ, ಜಾರ್ಖಂಡ್, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಮಣಿಪುರ, ಒಡಿಶಾ, ಪಂಜಾಬ್, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ, ಆಂಧ್ರಪ್ರದೇಶ ಮತ್ತು ಕರ್ನಾಟಕ ಸೇರಿದಂತೆ 18 ರಾಜ್ಯಗಳಿಗೆ 84,37,139 ಮನೆಗಳ ಗುರಿಯನ್ನು ಸಚಿವಾಲಯ ನಿಗದಿಪಡಿಸಿದೆ.

ಒಂದನೇ ಪುಟದಿಂದ

## ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ:ನಿರಾಣಿ

ತಂದಿರುವ ಅನುದಾನದಲ್ಲಿ ದೇವಸ್ಥಾನ ಕಾರ್ಯ ಆರಂಭಿಸಿದ್ದಾರೆ ಎಂದು ಹೇಳಿದ ಮುರುಗೇಶ ನಿರಾಣಿ, ಅನುದಾನ ನಾನು ತಂದಿದ್ದೇನೆ ಅಂತ ಜೆ.ಟಿ.ಪಾಟೀಲ ಹೇಳುತ್ತಿರುವುದು ಶುದ್ಧ ಸುಳ್ಳು ಎಂದರು. ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಯಾವುದೇ ಧಕ್ಕೆ ತರಬಾರದು. ಬಹಳಷ್ಟು ಪ್ರಯತ್ನ ಮಾಡಿ ನಮ್ಮ ಸರ್ಕಾರದ ಅವಧಿಯಲ್ಲಿ ತಂದಿದ್ದೇನೆ. ತನ್ನ ಕಾರ್ಯವ್ಯಾಪ್ತಿಗೆ ತಕ್ಕ ಕೆಲಸ ಮಾಡುತ್ತಿದೆ. ಸರ್ಕಾರವೇ ಅನುದಾನ ನೀಡುತ್ತಿಲ್ಲ. ಮಂಡ್ಯಭಾಗಕ್ಕೆ ಹೊಸದಾಗಿ ತೋಟಗಾರಿಕೆ ವಿವಿ ಸ್ಥಾಪಿಸುವುದು ಬೇಡ. ಇದಲ್ಲೆ ಸರ್ಕಾರ ಮುಂದಾದಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು. ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಹೂವಪ್ಪ ರಾಠೋಡ ಇದ್ದರು.

## ಟೋಲ್ ನೀತಿ:ಗಡ್ಕರಿ

ಸಂಚಾರಕ್ಕೆ ಕಾರಣವಾಗುತ್ತದೆ ಎಂದರು.ಟೋಲ್ ಸಂಗ್ರಹದ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿನ ಮೀಮ್‌ಗಳ ಕುರಿತು ಮಾತನಾಡಿದ ಗಡ್ಕರಿ, 'ಅನೇಕ ಜನರು ನನ್ನನ್ನು ಸಾಮಾಜಿಕ ಮಾಧ್ಯಮದಲ್ಲಿ ಟ್ರೋಲ್ ಮಾಡುತ್ತಾರೆ. ಜನರು ಟೋಲ್ ಬಗ್ಗೆ ಸ್ವಲ್ಪ ಕೋಪಗೊಂಡಿದ್ದಾರೆ. ನಾನು ಈಗ ಏನನ್ನು ಹೇಳಬಹುದು ಎಂದರೆ ಟೋಲ್ ಮೇಲಿನ ಕೋಪವು ಕೆಲವೇ ದಿನಗಳಲ್ಲಿ ದೂರವಾಗುತ್ತದೆ' ಎಂದು ತಿಳಿಸಿದ್ದಾರೆ.ಭಾರತವು ವಿಶ್ವದ ಎರಡನೇ ಅತಿದೊಡ್ಡ ರಸ್ತೆ ಜಾಲವನ್ನು ಹೊಂದಿದೆ. ಅದರ ರಾಷ್ಟ್ರೀಯ ಹೆದ್ದಾರಿಗಳು ಒಟ್ಟು 1,46,195 ಕಿಮೀ ಉದ್ದವನ್ನು ವ್ಯಾಪಿಸಿದೆ. ದೇಶದ ಟೋಲ್ ಸಂಗ್ರಹ 2023–24 ರಲ್ಲಿ 64,809 ಕೋಟಿ ರೂಪಾಯಿ ಆಗಿದೆ. ಇದು ಹಿಂದಿನ ವರ್ಷಕ್ಕಿಂತ ಶೇ 35 ಕ್ಕಿಂತ ಹೆಚ್ಚಾಗಿದೆ.

## ಸತ್ಯಮೇವ ಜಯತೆ : ಸಚಿವ ಖಂಡ್ರೆ

ಕಲಬುರಗಿ,ಫೆ.7: ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಹೈಕೋರ್ಟ್ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಿಬಿಐ ತನಿಖೆಯ ಅವಶ್ಯಕತೆ ಇಲ್ಲ ಎಂದು ನೀಡಿರುವ ತೀರ್ಪಿಗೆ ರಾಜ್ಯದ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ 'ಸತ್ಯಮೇವ ಜಯತೇ' ಎಂದು ವ್ಯಾಖ್ಯಾನಿಸಿದರು.



ಕಲಬುರಗಿ ನಗರದ ಶಹಾಬಜಾರ್ ಚವದಾಪುರಿ ಹಿರೇಮಠದಿಂದ ಶ್ರೀ ಶರಣಬಸವೇಶ್ವರ ದೇವಾಲಯ ಆವರಣದಲ್ಲಿ ಹಮ್ಮಿಕೊಂಡಿರುವ ಶಿವ ಶಕ್ತಿ ಸಂಗಮ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಕ್ಕೂ ಮುನ್ನ ಸುದ್ದಿಗಾರರಿಂದಿಗೆ ಮಾತನಾಡಿದ ಅವರು,

ಉಚ್ಚ ನ್ಯಾಯಾಲಯದ ತೀರ್ಪು ಸ್ವಾಗತಿಸುವುದಾಗಿ ಹೇಳಿದರು.

ವಿರೋಧ ಪಕ್ಷಗಳು ದುರುದ್ದೇಶದಿಂದ ಆಡಳಿತ ಪಕ್ಷವನ್ನು ಬುಡಮೇಲು ಮಾಡಲು ಮುಂದಾಗಿದ್ದವು. ಹೊಟ್ಟೆಕಿಚ್ಚಿನಿಂದ ಮಾಡಿದ ವಿರೋಧಪಕ್ಷಗಳ ಆರೋಪದಲ್ಲಿ ಹುರುಳಿಲ್ಲ ಎಂಬುದು ಇದರಿಂದ ಸಾಬೀತಾಗುತ್ತದೆ ಎಂದರು.

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರ ಯಾವುದೇ ರೀತಿಯಲ್ಲಿ ಇಲ್ಲ ಎಂದು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದೇವೆ. ಇಲ್ಲಿಯವರೆಗೆ ಅವರ ಪಾತ್ರವಿದೆ ಎಂಬುದಕ್ಕೆ ಏನಾದರೂ ಸಾಕ್ಷಿ ಇದೆಯೇ ಎಂದು ಅವರು ಪ್ರಶ್ನಿಸಿದರು.

ಇದೇವೇಳೆ, ಪೋಕ್ಸೊ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬಂಧಿಸದಂತೆ ಕೋರ್ಟ್ ನಿರ್ದೇಶನ ನೀಡಿರುವ ಕುರಿತು ಸುದ್ದಿಗಾರರ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿದ ಸಚಿವ ಖಂಡ್ರೆ, 'ಆ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಶರಣಕುಮಾರ್ ಮೋದಿ ಸೇರಿದಂತೆ ಇತರರಿದ್ದರು.

ದ್ವೇಷ ರಾಜಕಾರಣ ಗೊತ್ತಿಲ್ಲ

ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಒಡೆತನದ ಸಿದ್ದಸಿರಿ ಕಾರ್ಖಾನೆ ಬಂದ್ ಆಗಿರುವುದರ ಹಿಂದೆ ತಮ್ಮ ಕೈವಾಡ ಇಲ್ಲ. ತಮಗೆ ದ್ವೇಷ ರಾಜಕಾರಣ ಗೊತ್ತಿಲ್ಲ ಎಂದು ಸಚಿವ ಈಶ್ವರ ಖಂಡ್ರೆ ಸಮಜಾಯಿಷಿ ನೀಡಿದರು.

ಯತ್ನಾಳ್ ಕಾರ್ಖಾನೆ ಬಂದ್ ಮಾಡಿರುವುದರ ಹಿಂದೆ ಸಚಿವ ಖಂಡ್ರೆ ಕೈವಾಡವಿದೆ ಎಂಬ ಆರೋಪದ ಕುರಿತು ಸುದ್ದಿಗಾರರು ಗಮನ ಸೆಳೆದಾಗ ಹೀಗೆ ಪ್ರತಿಕ್ರಿಯಿಸಿದ ಖಂಡ್ರೆ, ಯತ್ನಾಳ್ ಅವರು ಸುಪ್ರೀಂಕೋರ್ಟ್,ಹೈಕೋರ್ಟ್ ಮೊರೆ ಹೋಗಿದ್ದರು. ಸುಪ್ರೀಂಕೋರ್ಟ್ ಆದೇಶವನ್ನು ನಾವು ಪಾಲನೆ ಮಾಡುತ್ತಿದ್ದೇವೆ.ಅವರು ವಾಯು ಮಾಲಿನ್ಯ ನಿಯಂತ್ರಣ ಮಂಡಳಿ ನಿಯಮಾವಳಿ ಉಲ್ಲಂಘನೆ ಮಾಡಿದ್ದಾರೆ. ಹಾಗಾಗಿ ಕಾರ್ಖಾನೆ ಬಂದ್ ಆಗಿದೆ ಎಂದರು.

## ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್
## ಕಠಿಣ ಷರತ್ತುಗಳ ಸಡಿಲಿಸಲು ಕೆಯುಡಬ್ಲೂಜೆ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಫೆ.7:ಗ್ರಾಮೀಣ ಪತ್ರಕರ್ತರಿಗೆ ಉಚಿತವಾಗಿ ಬಸ್ ಪಾಸ್ ನೀಡಲು ಹಾಕಿರುವ ಕೆಲ ಕಠಿಣ ಷರತ್ತುಗಳನ್ನು ಸಡಿಲಿಸಬೇಕು ಎಂದು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ(ಕೆಯುಡಬ್ಲೂಜೆ)ದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಒತ್ತಾಯಿಸಿದ್ದಾರೆ.

ಮೂರು ದಶಕಗಳ ಕೆಯುಡಬ್ಲೂಜೆ ಬೇಡಿಕೆಗೆ ಮನ್ನಣೆ ನೀಡಿ, ಬಸ್ ಪಾಸ್ ಜಾರಿ ನೀಡಿದ್ದನ್ನು ಸ್ವಾಗತಿಸಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವ ಅವರು, ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ನುಡಿದಂತೆ ನಡೆದುಕೊಂಡಿರುವುದಕ್ಕಾಗಿ ಸಿಎಂ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದ್ದಾರೆ.

ತಾಲೂಕು ಮತ್ತು ಹೋಬಳಿ ಹಂತದಲ್ಲಿ ಕೆಲಸ ಮಾಡುವ ಗ್ರಾಮೀಣ ಪತ್ರಕರ್ತರಿಗೆ ಯಾವ ಮಾಧ್ಯಮ ಸಂಸ್ಥೆಗಳು ಪೂರ್ಣಾವಧಿ ನೇಮಕಾತಿ ಪತ್ರ ನೀಡುವುದಿಲ್ಲ. ಆದ್ದರಿಂದ ಈ ವಿಷಯ ಗಂಭೀರವಾಗಿ ಪರಿಗಣಿಸಿ, ಪೂರ್ಣಾವಧಿ ನೇಮಕ ಎನ್ನುವುದನ್ನು ಕೈಬಿಡಬೇಕು ಎಂದು ಮನವಿ ಮಾಡಿದ್ದಾರೆ.

ಮಾನ್ಯತೆ ಪಡೆದ ಪತ್ರಿಕೆಯಲ್ಲಿ ಕೆಲಸ ಮಾಡುವ ಎಲ್ಲ ಪತ್ರಕರ್ತರನ್ನು ಯೋಜನೆ ವ್ಯಾಪ್ತಿಗೆ ಒಳಪಡಿಸಬೇಕು. ಜಿಲ್ಲಾ ಮಟ್ಟದ ಪತ್ರಿಕೆಗಳಿಗೆ ತಾಲೂಕು ಮಟ್ಟದಲ್ಲಿ ವರದಿಗಾರರಾಗಿರುವ ಎಲ್ಲಾ ಪತ್ರಕರ್ತರಿಗೂ ಬಸ್ ಪಾಸ್ ನೀಡಬೇಕು. ಹೋಬಳಿ ಹಂತದಲ್ಲಿಯೂ ಹಲವು ಪತ್ರಿಕೆಗಳಿಗೆ ವರದಿಗಾರರಿರುವ ಕಾರಣ ಈ ಸೌಲಭ್ಯ ವಿಸ್ತರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಜಿಲ್ಲಾ ಮಟ್ಟದಲ್ಲಿಯೇ ಬಸ್ ಪಾಸ್‌ಗಾಗಿ ಅರ್ಹ ಪತ್ರಕರ್ತರ ಆಯ್ಕೆ ಪ್ರಕ್ರಿಯೆ ಸುಗಮವಾಗಿ ನಡೆಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಕೆಯುಡಬ್ಲೂಜೆ ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ಹಿರಿಯ ಪತ್ರಕರ್ತರೊಬ್ಬರನ್ನು ಸದಸ್ಯರನ್ನಾಗಿ ನೇಮಕ ಮಾಡಬೇಕು ಎಂದು ಶಿವಾನಂದ ತಗಡೂರು ಅವರು ಮನವಿ ಮಾಡಿದ್ದಾರೆ.

## ಬೀದರ್-ಜಿಡಗಾ ಹೊಸ ಬಸ್ ಸಂಚಾರಕ್ಕೆ ಚಾಲನೆ



ಬೀದರ್ಫೆ.7:ಬೀದರ್–ಜಿಡಗಾ ಮಧ್ಯೆ ಹೊಸ ಬಸ್ ಸಂಚಾರ ಶುಕ್ರವಾರ ಆರಂಭಗೊಂಡಿತು.

ಔರಾದ್ ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಸದಸ್ಯ ರಾಜಕುಮಾರ ಬಿ. ಕಂದಗೂಳೆ ಬಸ್‌ಗೆ ಚಾಲನೆ ನೀಡಿದರು.

ಬಸ್ ನಿತ್ಯ ಮಧ್ಯಾಹ್ನ 3.15ಕ್ಕೆ ಬೀದರನಿಂದ ಹೊರಡಲಿದೆ. ಕಲಬುರಗಿ,ಆಳಂದ ಮಾರ್ಗವಾಗಿ ಜಿಡಗಾಕ್ಕೆ ತಲುಪಲಿದೆ. ಹೊಸ ಬಸ್‌ನಿಂದ ಜಿಡಗಾಕ್ಕೆ ತೆರಳುವ ಭಕ್ತರು ಹಾಗೂ ಪ್ರಯಾಣಿಕರಿಗೆ ಅನುಕೂಲವಾಗಲಿದೆ ಎಂದು ಅವರು ಹೇಳಿದರು.ವಿಭಾಗೀಯ ಸಂಚಾರ ಅಧಿಕಾರಿ ಐ.ಎಂ. ಬಿರಾದಾರ, ಘಟಕ 1 ರ ವ್ಯವಸ್ಥಾಪಕ ವಿ.ಎ. ಭೋವಿ, ಕಾರ್ಮಿಕ ಅಧಿಕಾರಿ ರಾಜಶೇಖರ ತಳಘಟಕರ್, ನಥಾನಿಯಲ್, ವಿಜಯಪ್ರಕಾಶ್ ಸಿಂಧೆ, ಚಾಲಕ ಸಂತೋಷ್ ಮತ್ತಿತರರು ಇದ್ದರು.

## ನೂತನ ಹೈಮಾಸ್ಟ್ ದೀಪ ಉದ್ಘಾಟನೆ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಫೆ.7: ನಗರದ ಕನಕನಗರ ಬಡವಣೆಯಲ್ಲಿ ನೂತನ ಹೈಮಾಸ್ಟ್ ಅಳವಡಿಸಿದ್ದು, ನಗರಸಭೆ ಸದಸ್ಯ ಬಸವರಾಜ ಚೆನ್ನೂರ ಉದ್ಘಾಟಿಸಿದರು. ಶಾಲಾ–ಕಾಲೇಜು,ಬಸ್‌ನಿಲ್ದಾಣ, ಟ್ಯೂಷನ್ ತರಗತಿ,ಕೋರ್ಟ್‌ಗೆ ಹೋಗುವ ರಸ್ತೆ ಇದಾಗಿದ್ದು,ಜನ ವಾಹನ ಸಂಚಾರ,ಜನದಟ್ಟನೆ ಇರಲಿದೆ. ಬೆಳಕಿನ ವ್ಯವಸ್ಥೆ ಇಲ್ಲದೇ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತೆ–ಊಂದರೆ ಆಗುತ್ತಿದ್ದು, ಇದರಿಂದ ಹೈಮಾಸ್ಟ್ ಅಳವಡಿಸಿದ್ದು ಜನರಿಗೆ ಅನುಕೂಲವಾಗಲಿದೆ ಎಂದರು.ಬಡವಣೆಯಲ್ಲಿ ಕಳ್ಳತನದಂತಹ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆ ಕುರುಬ ಸಮಾಜದ ವತಿಯಿಂದ ನಗರಸಭೆಯ ಪೌರಾಯುಕ್ತರಿಗೆ ಮನವಿ ಸಲ್ಲಿಸಲಾಗಿತ್ತು. ಇದರ ಬೆನ್ನಲ್ಲೇ ನೂತನ ಹೈಮಾಸ್ಟ್ ದೀಪಗಳನ್ನು ಅಳವಡಿಸಿದ್ದು, ಕನಕ ಬಡವಣೆ ಮತ್ತು ಬಸವೇಶ್ವರ ಬಡವಣೆಯ ಜನತೆ ವತಿಯಿಂದ ವಾರ್ಡ್ ಸದಸ್ಯ ಬಸವರಾಜ ಚೆನ್ನೂರ ಅವರನ್ನು ಸನ್ಮಾನಿಸಿದರು. ಸಚಿವರ ಆಪ್ತಸಹಾಯಕ ಶಿವಶರಣ ಇಟಗಿ ಮಾತನಾಡಿ, ಈ ಭಾಗದಲ್ಲಿ ನಿತ್ಯಹೆಚ್ಚು ಜನದಟ್ಟಣೆ ಇರಲಿದ್ದು, ಈ ಬಗ್ಗೆ ಸಚಿವರ ಗಮನಕ್ಕೆ ತಂದು ನಗರಸಭೆ ವತಿಯಿಂದ ವಾರದೊಳಗೆ ಬಡವಣೆ ಜನತೆಯ ಹಿತದೃಷ್ಟಿಯಿಂದ ಸಿಸಿ ಕ್ಯಾಮೆರಾ ಅಳವಡಿಸಿ ಕೊಡುವುದಾಗಿ ತಿಳಿಸಿದರು. ಯಲ್ಲಪ್ಪನರಿ, ಮಲ್ಲಣ್ಣ ಉಳ್ಳಂಡಗೇರ, ಮಹೇಶ ಮಡಿವಾಳಕ ಹಾಗೂ ಇತರರಿದ್ದರು.

## ತಾಂಡದ ಬಹುದಿನ ಬೇಡಿಕೆ ಈಡೇರಿಕೆ :ಹರ್ಷ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಫೆ.7:ತಾಲೂಕಿನ ಶಖಾಪುರ ತಾಂಡದವರೆಗೆ 1.30 ಕೋಟಿ ರೂ ವೆಚ್ಚದಲ್ಲಿ, 1.2 ಕಿ.ಮೀ. ಡಾಂಬರೀಕರಣ, ನಿರ್ಮಾಣ ಹಾಗೂ ರಸ್ತೆ ಬದಿಗೆ ಮುಖ್ಯ ಕಾಲುವೆಯ ಭದ್ರತೆಯ ದೃಷ್ಟಿಯಿಂದ ಕೃ.ಭಾ.ಜ.ನಿಗಮದ ಅನುಮತಿಯೊಂದಿಗೆ ವಿಶೇಷ ತಂತಿ ಬೇಲಿ ಜೋಡಿಸುವ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ ಎಂದು ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ಯಮ ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ತಿಳಿಸಿದರು.ರಸ್ತೆ ಕಾಮಗಾರಿಯನ್ನು ಪರಿಶೀಲಿಸಿ ಸುದ್ದಿಗಾರದೊಂದಿಗೆ ಮಾತನಾಡಿದ ಅವರು, ಕೆ–ಕೆಆರ್‌ಡಿಬಿ ಅನುದಾನದಡಿಯಲ್ಲಿ ಕಾಮಗಾರಿ ಕೈಗೊಂಡಿದ್ದು, ತಾಂಡಾದ ಜನತೆಗೆ ಮುಖ್ಯರಸ್ತೆ ಸಮೀಪವಾಗಲಿದ್ದು, ಸಂಚಾರಕ್ಕೆ ಅನುಕೂಲವಾಗಲಿದೆ ಎಂದರು. ಅಲ್ಲದೆ, ಯಾವುದೇ ಕಾರಣಕ್ಕೆ ಭಾರವಿರುವ ವಾಹನಗಳು ಈ ರಸ್ತೆಯಲ್ಲಿ ಸಂಚರಿಸುವಂತಿಲ್ಲ, ಈ ಕುರಿತು ಎತ್ತರ ನಿರ್ಬಂಧದ ತಡೆ ಹಾಕಲು ಸಂಬಂಧಿಸಿದ ಇಂಜಿನಿಯರ್‌ಗಳಿಗೆ ಸೂಚಿಸಿದರು. ತಾಂಡಾದ ಯುವಕರು,ಹಿರಿಯರು ಸಚಿವರನ್ನು ಆತ್ಮೀಯವಾಗಿ ಸ್ವಾಗತಿಸಿ ತಾಂಡಾದ ಹಲವು ಮೂಲಭೂತ ಸೌಕರ್ಯದ ಬಗ್ಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಶಿವಮಹಾಂತ ಚಂದಾಪುರ, ಉಮೇಶ ರಾಠೋಡ, ರಾಮು ರಾಠೋಡ, ಭೋಜು ನಾಯಕ, ಶಿವರಾಜ ರಾಠೋಡ,

ರಮೇಶ, ಗ್ರಾ.ಪಂ ಸದಸ್ಯರು, ಸೇರಿದಂತೆ ಯುವಕರು ಮತ್ತು ಕರ್ನಾಟಕ ಭೂ ಸೇನಾ ನಿಗಮದ ಇಂಜಿನಿಯರ್ ರಫೀಕ ಅಹ್ಮದ ಇದ್ದರು.

## ರಸ್ತಾಪುರ ಗ್ರಾಮದ ಕೃಷಿ ಕೂಲಿಕಾರರಿಗೆ ಉದ್ಯೋಗ ಖಾತ್ರಿ ಕೆಲಸ ಕೊಡಬೇಕೆಂದು ಒತ್ತಾಯಿಸಿ ಪ್ರತಿಭಟನೆ



ಮಲ್ಲಮ್ಮ ನುಡಿ

ಶಹಾಪೂರ:ಫೆ.7: ಪ್ರಾಂತ ರೈತ ಸಂಘದ ತಾಲೂಕ ಸಮಿತಿ.ನೇತೃತ್ವದಲ್ಲಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಒಂದು ಕೊಡಕೆ 10 ರುಪಾಯಿ ಉಸಲಿ ಮಾಡುವುದನ್ನು ನಿಲ್ಲಿಸಬೇಕು.ರಸ್ತಾಪುರ ಗ್ರಾಮದಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೆ ರಸ್ತೆ ಮೇಲೆ ನೀರು ಬರುತ್ತಿದ್ದು ಪುಟ್ಟ ಮಕ್ಕಳಿಗೆ ಮತ್ತು ವೃದ್ಧರಿಗೆ ಹಾಗೂ ಸಾರ್ವಜನಿಕರಿಗೆ ರೋಗ ಹರಡುತ್ತಿದ್ದು ಕೂಡಲೇ ಇದನ್ನು ಸರಿಪಡಿಸಬೇಕೆಂದು ಒತ್ತಾಯಿಸಲಾಯಿತು. ಹಲವು ವರ್ಷಗಳಿಂದ ಸರ್ಕಾರದ ಆಶ್ರಯ ಮನೆಗಳು ಬಂದು. ಇಲ್ಲಿಯವರೆಗೆ ದಲಿತ ರೈತ ಕೃಷಿ ಕೂಲಿ ಕಾರ್ಮಿಕರಿಗೆ ನೀವೇಷನ ಕೊಟ್ಟಿಲ್ಲ. ಬಡವರಿಗೆ ನಿವೇಶನ ಕೊಡಬೇಕೆಂದು ಒತ್ತಾಯಿಸಿತು. 200 ನೂರು ದಿನ ಕೆಲಸ ಮತ್ತು ನೆರೆಗ ಯೋಜನೆಯಲ್ಲಿ ಒಂದು ದಿನಕ್ಕೆ 600.ರೂಪಾಯಿ ಕೂಲಿ ಕೊಡಬೇಕೆಂದು ಒತ್ತಾಯಿಸಿತು.

ರಸ್ತಾಪುರ ಕನಕದಾಸರ ಚೌಕಿನಿಂದ ಗ್ರಾಮಪಂಚಾಯತಿವರೆಗೆ ಮೆರವಣಿಗೆ ಮಾಡಲಾಯಿತು ಗ್ರಾಮಪಂಚಾಯತ್ ಅಧಿಕಾರಿಗಳ ವಿರುದ್ಧ.ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ವಿರುದ್ಧ. ಘೋಷಣೆಗಳು ಕೂಗುವ ಮೂಲಕ ಪ್ರತಿಭಟನೆ ನಡೆಸಿದರು. ರಸ್ತಾಪುರ ಗ್ರಾಮದ. ಎಸ್ಸಿ ಮತ್ತು ಎಸ್‌ಟಿ ಓಣಿಗಳಲ್ಲಿ. ಹತ್ತಾರು ಪೀಡೆಗಳು ಹತ್ತಾರು ಗ್ರಾಮ ಪಂಚಾಯತಿ ಅಧ್ಯಕ್ಷರು ಹತ್ತಾರು ಗ್ರಾಮ ಪಂಚಾಯಿತಿ ಸದಸ್ಯರು ಚೇಂಜ್ ಆದರೂ ಕೂಡ ದಲಿತರ ಓಣಿಗಳಿಗೆ ನೀರು ಒದಗಿಸಿಕೊಡುವಲ್ಲಿ ವಿಫಲವಾಗಿರುತ್ತಾರೆ ದಲಿತರ ಓಣಿಯಲ್ಲಿ ವಾಸ ಮಾಡುತ್ತಿರುವ ದಲಿತರು ಗ್ರಾಮ ಪಂಚಾಯಿತಿಗೆ ಇಡಿ ಶಾಪ ಹಾಕುತ್ತಿದ್ದಾರೆ. ಕೂಡಲೇ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ದಲಿತರಿಗೆ ತುಸು ಕುಡಿಯಲು ನೀರು ಒದಗಿಸಿಕೊಡಬೇಕೆಂದು ಕಳಕಳಿಯ ಮನವಿ ಮಾಡಿದರು ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಚೆನ್ನಪ್ಪ ಆನೆಗುಂದಿ. ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕ ಅಧ್ಯಕ್ಷರಾದ ಭೀಮಣ್ಣ ತಪ್ಪೇದಾರ್. ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕ ಕಾರ್ಯದರ್ಶಿಯಾದ ಭೀಮರಾಯ ಪೂಜಾರಿ. ಕಾರ್ಮಿಕ ಸಂಘಟನೆ ಮುಖಂಡರು ಲಕ್ಷ್ಮಣ ವಿರುಪಾಪುರ್. ಗ್ರಾಮ ಘಟಕದ ಅಧ್ಯಕ್ಷರಾದ ಶರಬಣ್ಣ. ಮಲ್ಲು ಮಡಿವಾಳ. ರೈತ ಕೂಲಿ ಕಾರ್ಮಿಕರು ಭಾಗವಹಿಸಿದ್ದರು.

## ಕೌಶಲ ಇದ್ದವರಿಗೆ ಉದ್ಯೋಗ ಅವಕಾಶ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 07 : ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ ಇದ್ದವರಿಗೆ ವಿಪುಲ ಉದ್ಯೋಗ ಅವಕಾಶಗಳು ಇವೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಗಿರೀಶ್ ಬದೋಲೆ ನುಡಿದರು.

ವಚನ ವಿಜಯೋತ್ಸವ ಅಂಗವಾಗಿ ಬಸವ ಕಾಯಕ, ದಾಸೋಹ ಫೌಂಡೇಷನ್ ವತಿಯಿಂದ ಇಲ್ಲಿಯ ಕೆ.ಇ.ಬಿ. ಕಚೇರಿ ರಸ್ತೆಯಲ್ಲಿ ಇರುವ ಐ.ಎಂ.ಎ. ಹಾಲನಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ಕೌಶಲ ಅಭಿವೃದ್ಧಿ ಕಾರ್ಯಾಗಾರವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವದಲ್ಲೇ ಅತಿ ಹೆಚ್ಚು ಯುವಕರನ್ನು ಹೊಂದಿರುವ ರಾಷ್ಟ್ರ ಭಾರತ. ಕೌಶಲಕ್ಕೆ ಬಹು ಬೇಡಿಕೆ ಇರುವ ಕಾರಣ ಯುವಕರು ಏನಾದರೂ ಕೌಶಲ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಯುವ ಜನರಲ್ಲಿ ಕೌಶಲ ಬೆಳೆಸುವ ದಿಸೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಿವೆ. ಜಿಲ್ಲೆಯ ಯುವಕರಿಗೆ ನೆರವಾಗಲು ಬಸವ ಕಾಯಕ, ದಾಸೋಹ ಫೌಂಡೇಷನ್ ಅಧ್ಯಕ್ಷ ಬಸವರಾಜ ಧನ್ನೂರ ಅವರು ಕಾರ್ಯಾಗಾರ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಹೇಳಿದರು.

ಬಸವ ಸೇವಾ ಪ್ರತಿಷ್ಠಾನದ ಅಧ್ಯಕ್ಷೆ ಡಾ. ಗಂಗಾಂಬಿಕೆ ಅಕ್ಕ ಮಾತನಾಡಿ, ವಚನ ವಿಜಯೋತ್ಸವ ಅರ್ಥಪೂರ್ಣವಾಗಿಸುವ ದಿಸೆಯಲ್ಲಿ ಬಸವರಾಜ ಧನ್ನೂರ ಅವರು ಕಾರ್ಯಾಗಾರ ಸಂಘಟಿಸಿದ್ದಾರೆ. ಬಸವ ಸೇವಾ ಪ್ರತಿಷ್ಠಾನ ಹಾಗೂ ವಚನ ವಿಜಯೋತ್ಸವಕ್ಕೆ ಅವರ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದರು.

ಯುವಕರು ಕೌಶಲಕ್ಕೆ ಆದ್ಯತೆ ಕೊಡಬೇಕು. ಉತ್ತಮ ಜೀವನ ರೂಪಿಸಿಕೊಳ್ಳಲು ವಚನ ಸಾಹಿತ್ಯದ ಅಧ್ಯಯನ ಮಾಡಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಫೌಂಡೇಷನ್ ಅಧ್ಯಕ್ಷ ಬಸವರಾಜ ಧನ್ನೂರ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ ಹೊಂದುವುದು ಬಹಳ ಅವಶ್ಯಕವಾಗಿದೆ. ಹೀಗಾಗಿ ಜಿಲ್ಲೆಯ ಯುವಜನರಿಗೆ ಕೌಶಲದ ಮಹತ್ವ ಮನವರಿಕೆ ಮಾಡಿಕೊಡಲು ಹಾಗೂ ಅವರಲ್ಲಿ ಕೌಶಲ ಬೆಳೆಸಲು ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಬಸವ ಕಾಯಕ, ದಾಸೋಹ ಫೌಂಡೇಷನ್ ಎಂಟು ವರ್ಷಗಳಿಂದ ನಿರಂತರ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿದೆ. ಕೋವಿಡ್ ಸಂದರ್ಭದಲ್ಲಿ ಸಾವಿರ ಬಡ ಕುಟುಂಬಗಳಿಗೆ ಆಹಾರ ಧಾನ್ಯ ಕಿಟ್ ವಿತರಿಸಿದೆ. ಬಡ ಮಕ್ಕಳ ಶಿಕ್ಷಣ, ಬಡ ಹೆಣ್ಣುಮಕ್ಕಳ ಮದುವೆ, ಪುಸ್ತಕ ಪ್ರಕಟಣೆಗೆ ನೆರವಾಗಿದೆ. ಸಾಧಕರಿಗೆ ಪ್ರೇರಣೆ ನೀಡುವ ಅನೇಕ ಪ್ರಶಸ್ತಿಗಳ ಮೊತ್ತ ಭರಿಸಿದೆ. ಮುಂದಿನ ದಿನಗಳಲ್ಲಿಯೂ ಫೌಂಡೇಷನ್ ತನ್ನ ಸೇವಾ ಕಾರ್ಯಗಳನ್ನು ಮುಂದುವರಿಸಲಿದೆ ಎಂದು ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಪತ್ರಕರ್ತ ಶಶಿಕಾಂತ ಶೆಂಬೆಳ್ಳಿ ಹಾಗೂ ಡಿ.ವಿ. ಸನ್ ಟ್ರೈನಿಂಗ್ ಡಿವಿಸನ್ ಸಿಇಒ ಶಿವಾನಂದ ಡಿ.ವಿ. ಅವರನ್ನು ಸನ್ಮಾನಿಸಲಾಯಿತು.

ಎಚ್.ಕೆ.ಇ. ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಡಾ. ರಜನೀಶ್ ವಾಲಿ, ಕೆ.ಆರ್.ಇ. ಸಂಸ್ಥೆಯ ಕಾರ್ಯದರ್ಶಿ ಸತೀಶ್ ಪಾಟೀಲ, ಐ.ಎಂ.ಎ. ಬೀದರ್ ಘಟಕದ ಅಧ್ಯಕ್ಷ ಡಾ. ವಿಜಯ ಕೋಟೆ, ಜಿ.ಎನ್.ಡಿ. ಎಂಜಿನಿಯರಿಂಗ್ ಕಾಲೇಜು ನಿರ್ದೇಶಕ ಸರ್ದಾರ್ ಪುನೀತಸಿಂಗ್, ವಚನ ವಿಜಯೋತ್ಸವದ ಕಾರ್ಯಾಧ್ಯಕ್ಷ ವಿಶ್ವನಾಥ ಕಾಜಿ, ರೋಟರಿ ಕಲ್ಯಾಣ ಝೋನ್ ಸಹಾಯಕ ಗವರ್ನರ್ ಸೂರ್ಯಕಾಂತ ರಾಮಶೆಟ್ಟಿ, ಹೈ ಐಡಿಯಲ್ಸ್ ಟೆಕ್ನಾಲಜೀಸ್ ಸಿಇಒ ಸಚ್ಚಿದಾನಂದ ಚಿದ್ರೆ, ರಾಜೇಶ್ವರ, ಬಸವೇಶ್, ಗುಂಡಪ್ಪ ಬಳತೆ, ಶಿವರಾಜ ಮದಕಟ್ಟಿ ಇದ್ದರು.

ಉಷಾ ಮಿರ್ಚೆ ವಚನ ಗಾಯನ ಮಾಡಿದರು. ಫೌಂಡೇಷನ್ ಕಾರ್ಯದರ್ಶಿ ಸುವರ್ಣಾ ಧನ್ನೂರ ಸ್ವಾಗತಿಸಿದರು. ಸ್ಫೂರ್ತಿ ಧನ್ನೂರ ನಿರೂಪಿಸಿದರು. ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಜೊನ್ನಿಕೇರಿ ವಂದಿಸಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.

# ಅನುದಾನಿತ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಕಿರಣಕುಮಾರ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಫೆ.7: ತಾಲೂಕಿನ ಅನುದಾನಿತ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಮಹಾತ್ಮಾಗಾಂಧಿ ಪ್ರೌಢಶಾಲೆ ಕಲವಾಡಿಯ ಮುಖ್ಯ ಶಿಕ್ಷಕ ಕಿರಣಕುಮಾರಭಾಟಸಾಂಗವಿಕರ ರವರನ್ನುಸರ್ವಾನುಮತದಿಂದ ಆಯ್ಕೆಮಾಡಲಾಯಿತು.

ಪಟ್ಟಣದಚನ್ನಬಸವಾಶ್ರಮದಲ್ಲಿ ನಡೆದಅನುದಾನಿತಪ್ರೌಢಶಾಲಾ ಮುಖ್ಯಶಿಕ್ಷಕರ ಸರ್ವ ಸದಸ್ಯರ ಸಭೆಯಲ್ಲಿ ಸತ್ಯನಿಕೇತನ ಪ್ರೌಢಶಾಲೆಯ ಮುಖ್ಯಶಿಕ್ಷಕ ನಾಮದೇವ ರಾಠೋಡ್ ರವರು ಪ್ರಸ್ತಾಪಿಸಿದರೆ, ಶಿವಾಜಿ ಪ್ರೌಢಶಾಲೆಯ ಮುಖ್ಯಶಿಕ್ಷಕ ಮಾಧವ ಸಿಂಧೆ ಅನುಮೋದಿಸಿದರು. ಇದಕ್ಕೆ ಸಭೆಯಲ್ಲಿದ್ದ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು.

ಸಂಘದ ಪದಾಧಿಕಾರಿಗಳ ವಿವರ:

ಚಂದ್ರಕಾಂತ ಖಂಡಾಳೆ (ಗೌರವಾಧ್ಯಕ್ಷರು), ಅನೀಲಕುಮಾರಗಾಯಕವಾಡ (ಕಾರ್ಯದರ್ಶಿಗಳು),ನಾಮದೇವ ರಾಠೋಡ,ನರಸಿಂಗ ಇಂಗಳೆ (ಉಪಾಧ್ಯಕ್ಷರು),ಸತೀಶಗುಂಜರಗೆ (ಖಜಾಂಚಿಗಳು), ಮಾಧವ ಸಿಂಧೆ (ಸಹಕಾರ್ಯದರ್ಶಿ), ಸುರೇಶ ಪ್ರಭಾ (ಸಂಘಟನಾ ಕಾರ್ಯದರ್ಶಿ),ವಿಜಯಕುಮಾರ ಬಿರಾದಾರ(ಲೆಕ್ಕಪರಿಶೋಧಕರು), ಲಲಿತಾ ಜಾಧವ (ಮಹಿಳಾ ಸಂಘಟನಾ ಕಾರ್ಯದರ್ಶಿ), ಭರತ್ ಸಿಂಧೆ (ಸಾಂಸ್ಕೃತಿಕ ಕಾರ್ಯದರ್ಶಿ), ವಿಶ್ವನಾಥ ಪಕ್ಕಾ(ಕ್ರೀಡಾ ಕಾರ್ಯದರ್ಶಿ), ಮಲ್ಲಿಕಾರ್ಜುನ ಪಾಟೀಲ, ವಿಠಲರಾವ ಬಿರಾದಾರ, ಅಜೀಮ ಪಾಶಾ,ಚಂದ್ರಕಾಂತ ಸಾಧುರಾವಕಲವಾಡಿ,ಗುರುನಾಥ ಪವಾರ, ಸರಸ್ವತಿ ಸ್ವಾಮಿ (ನಿರ್ದೇಶಕರು). ಜಯರಾಜ ದಾಬಶೆಟ್ಟಿ,ಗೋವಿಂದರಾವ ಬಿರಾದಾರ,ರಾಮರಾವತೋರಣೆ (ಗೌರವ ಸಲಹೆಗಾರರು).

# ಝಳಕಿ ವಿಶೇಷ ಗ್ರಾಮ ಸಭೆ



ಮಲ್ಲಮ ನುಡಿ ವಾರ್ತೆ

ಇಂಡಿ :ಫೆ.7: ತಾಲ್ಲೂಕಿನ ಝಳಕಿ ಗ್ರಾಮ ಪಂಚಾಯತ ಆವರಣದಲ್ಲಿ ಬುಧುವಾರ ದಿವಸ 10 ಗಂಟೆಯಿಂದ ಮದ್ಯಾಹ್ನ 2 ಗಂಟೆಯವರೆಗೆ ಕಾನೂನಾತ್ಮವಾಗಿ ಗ್ರಾಮಸ್ಥರ ಸಮ್ಮುಖದಲ್ಲಿ, ನೂಡಲ್ ಅಧಿಕಾರಿಗಳಾದ ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಎಸ್. ಆರ್.ಗದ್ಯಾಳ ಮತ್ತು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಶಿವಾನಂದ ಅಂಗಡಿ ಇವರ ಸಹಯೋಗದಲ್ಲಿ 2024-25ನೇ ಸಾಲಿ ವಿಶೇಷಗ್ರಾಮ ಸಭೆಯನ್ನು ಹಮ್ಮಿಕೊಳ್ಳಲಾಯಿತು.

ಈ ಸಂದರ್ಬದಲ್ಲಿ ಅಧ್ಯಕ್ಷರು ಹಾಗೂ ನೂಡಲ್ ಅಧಿಕಾರಿಗಳ, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಮಾಹಿತಿಯನ್ನು ಪಡೆದು,ಗ್ರಾಮಸ್ಥರ ಅನುಮತಿ ಮೇರೆಗೆ ಯೋಜನೆ,ವಸತಿಗಳ ವಿಂಗಡನೆ,ನರೇಗಾ ಅನುದಾನದ ವಿಸ್ತರಣೆ ಬಗ್ಗೆ ಚರ್ಚಿಸಲಾಯಿತು, ಗ್ರಾಮ ಪಂಚಾಯತಿ ಅಡಿಯಲ್ಲಿ ಬರತಕ್ಕಂತಹಮ್ಮೈಲಾರ,ಅರ್ಜನಾಳ, ಝಳಕಿ ಗ್ರಾಮಸ್ಥರನ್ನು ಸಭೆಗೆ ಆಹ್ವಾನಿಸಲಾಗಿತ್ತು.

ಜನರಿಗೆ ಒಗುಡಿಸಿ ಯಾವುದೆ ಕಳಪೆ ಇಲ್ಲದಂತೆ, ಯಾರಿಗು ಅನ್ಯಾವಾಗದಂತೆ ಸರಿಯಾದ ಫಲಾನುಭವಿಗೆ ಸರಿಯಾದ ಯೋಜನೆ ತಲುಪುವಂತೆ ಆಗಬೇಕು ಎಂದು ಅಧ್ಯಕ್ಷರಾದ ರಯಿಶಾ ಶಬ್ಬಿರ ಮುಲ್ಲಾ ಇವರು ಸರ್ವರಿಗು ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.ಬಸವ ವಸತಿ ಯೋಜನೆಯಡಿ ಹೆಚ್ಚುವರಿ 76, ಅಲ್ಪಸಂಖ್ಯಾತ ವಸತಿ 19, ಅಂಬೆಡ್ಕರ ವಸತಿ ಯೋಜನೆಯಲ್ಲಿ ಎಸ್.ಸಿ 35, ಎಸ್.ಟಿ 21 ಹೀಗೆ ಒಟ್ಟು 151 ಮನೆಗಳನ್ನು ನೋಡಲ್ ಅಧಿಕಾರಿ ಎಸ್.ಆರ್.ಗದ್ಯಾಳ ಅನುಮೋದಿಸಿದರು,ನರೇಗಾ ಕ್ರೀಯಾಯೋಜನೆಅನುಮೋದನೆ, ತೆರಿಗೆ ಯಿಂದ ಹೊರಗುಳಿದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಯಲ್ಲಿ ಬರುವಂತೆ ಸೇರರಿಸಲಾಗಿದೆ. ಎಂದು ಗ್ರಾ-ಪಂ ಅಭಿವೃದ್ಧಿ ಅಧಿಕಾರಿ ಸಿ.ಜೆ.ಪಾರೆ ವಿವರಿಸಿದರು.

ಈಸಂದರ್ಭದಲ್ಲಿಉಪಾಧ್ಯಕ್ಷರಾದ ಕಾಶಿಬಾಯಿಪಾಟೀಲ,ಸದಸ್ಯರಾದ ಸಣ್ಣಪ್ಪ ತಳವಾರ, ಶಂಕರಗೌಡ ಬಿರಾದಾರ, ಹನುಮಂತ ಕೋಳಿ, ರಾಘವೇಂದ್ರಕೆಂಗಾರ, ಸವಿತಾ ಬಂಗಾರತಳ, ಸವಿತಾ ಬ ಪಾಟೀಲ, ಹನುಮಂತ ದ್ಯಾಮಗೋಳ, ನಾಗಮ್ಮ ಗೋಡೆಕಾರ, ಶ್ರೀಶೈಲ ಬಿರಾದಾರ, ಪ್ರಕಾಶಗೌಡ ಪಾಟೀಲ, ಹೇಮಾ ನಾಯ-ಕೋಡಿ, ಭಾಗ್ಯಶ್ರೀ ಹೂಗಾರ, ದೇವಕ್ಕಿ ಹರಿಜನ, ಹಾಗೂ ಕಾರ್ಯದರ್ಶಿಗಳಾದ ಮಧು ಕೊಡತೆ, ಸೋಮನಿಂಗ ಕಾಗರ, ವಿಜಯಕುಮಾರ, ಪುನಿತ, ರೇವಣಸಿದ್ಧ, ಪ್ರಿಯಾಂಕಾ ಕಾಗರ, ರಾಮಣ್ಣ ಕೋಳಿ ಮತ್ತು ಸಿಬ್ಬಂದಿಗಳು ಹಾಜರಿದ್ದರು.

## ರಾಷ್ಟ್ರೀಯ ರಸ್ತೆ ಸುರಕ್ಷತೆ ಮಾಸಾಚರಣೆಯ

# ಕಾಲ್ನಡಿಗೆ ಜಾಥಕ್ಕೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :ಫೆ.7: ಕೊಪ್ಪಳ ಪ್ರಾದೇಶಿಕ ಸಾರಿಗೆ ಕಛೇರಿ, ಶ್ರೀ ಗವಿಸಿದ್ದೇಶ್ವರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಹಾಗೂ ಸರಕಾರಿ ಪದವಿಪೂರ್ವ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತೆ ಮಾಸಾಚರಣೆ-2025ರ ಪ್ರಯುಕ್ತ ಕೊಪ್ಪಳ ನಗರದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾಲ್ನಡಿಗೆ ಜಾಥಕ್ಕೆ ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ರಾಮ್ ಎಲ್ ಅರಸಿದ್ಧಿ ಹಾಗೂ ಕಲಬುರಗಿ ವಿಭಾಗದ ಜಂಟಿ ಸಾರಿಗೆ ಆಯುಕ್ತರಾದ ಸಿದ್ದಪ್ಪ ಹೆಚ್ ಕಲ್ಲೇರ್ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.ಈ ಸಂದರ್ಭದಲ್ಲಿ ಕೊಪ್ಪಳ ಪ್ರಾದೇಶಿಕ ಸಾರಿಗೆ ಅಧಿಕಾರಿ ಕೆ.ದಾಮೋದರ್, ಪ್ರಾದೇಶಿಕ ಸಾರಿಗೆ ಇಲಾಖೆಯ ಹಿರಿಯ ಮೋಟಾರು ವಾಹನ ನಿರೀಕ್ಷಕರಾದ ಮಂಜುನಾಥ ಪ್ರಸಾದ್ ಹಾಗೂ ಡಿ.ಹೆಚ್.ವಿಜಯಕುಮಾರ, ಮೋಟಾರು ವಾಹನ ನಿರೀಕ್ಷಕ ವಿಜೇಂದ್ರ ಢವಳಗಿ ಸೇರಿದಂತೆ ಕಚೇರಿಯ ಸಿಬ್ಬಂದಿ, ಎನ್.ಸಿ.ಸಿ ಹಾಗೂ ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

*ಕಾಲ್ನಡಿಗೆ ಮೂಲಕ ಜಾಗೃತಿ:* ಕೊಪ್ಪಳ ನಗರದ ಅಶೋಕ ವೃತ್ತದಿಂದ ಶ್ರೀ ಗವಿಸಿದ್ದೇಶ್ವರ ಮಠದ ವರೆಗೆ ನಡೆದ ಕಾಲ್ನಡಿಗೆ ಜಾಥದಲ್ಲಿ ವಾಹನ ಸವಾರರು ಸಂಚಾರಿ ನಿಯಮಗಳನ್ನು ತಿಳಿದುಕೊಳ್ಳಿ, ಸಂಚಾರಿ ನಿಯಮಗಳನ್ನು ತಪ್ಪದೇ ಪಾಲಿಸಿ, ವಾಹನದ ಕನ್ನಡಿಗಳು ನಮ್ಮ ಮೂರನೇಯ ಕಣ್ಣು, ರಸ್ತೆ ತಿರುವುಗಳಲ್ಲಿ ಹಾರ್ನ್ ಮಾಡಿ, ವಿಮೆ ಮಾಡಿಸದೇ ವಾಹನ ಬಳಸಬೇಡಿ, ಆಗ ಬಹುದು ವೇಗದ ಚಾಲನೆ ನಿಮ್ಮ ಅಂತಿಮ ಚಾಲನೆ, 'ವೇಗವನ್ನು ಕೊಲ್ಲಿರಿ, ಮುಗ್ದ ಜೀವಿಗಳು & ನಿಮ್ಮ ಜೀವನವನ್ನಲ್ಲ', 'ಸೀಟ್ ಬೆಲ್ಟ್ ಧರಿಸಿ, ಇದುವೇ ಜೀವ, ಇದುವೇ ನಿಮಯ', '100 ರಲ್ಲಿ ಹೋಗಬೇಡಿ 108ರಲ್ಲಿ ಬರಬೇಡಿ, 'ಅಗತ್ಯ ಸಂದರ್ಭದಲ್ಲಿ ವೇಗವನ್ನು ತಗ್ಗಿಸಿ, ಜೀವವನ್ನು ಉಳಿಸಿ', ಸಂಚಾರಿ ಪೊಲೀಸರು ನಿಮ್ಮ ಜೀವ ರಕ್ಷಕರು, ಎಡಬದಿಯಿಂದ ಓರ್‌ಟೇಕ್ ಮಾಡಬೇಡಿ, ಹೀಗೆ ವಿವಿಧ ಜಾಗೃತಿ ಫಲಕಗಳನ್ನು ಹಿಡಿದು, ಘೋಷಣೆಗಳನ್ನು ಕೂಗುತ್ತಾ, ಅಧಿಕಾರಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಿದರು.

# ಸಿದ್ದಮ್ಮಾ ಶಾಲೆಯ ಮಕ್ಕಳಿಗೆ ತೆರೆದ ಮನೆ ಮೂಲಕ ಕಾನೂನು ಅರಿವು



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಫೆ.7:ಪಟ್ಟಣದ ಹೊರ ವಲಯದಲ್ಲಿ ಇರುವ ಸಿದ್ದಮ್ಮಾ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ತೆರೆದ ಮನೆ ಕಾರ್ಯಕ್ರಮದ ಅಡಿ ಕಮಲನಗರ ಪೊಲೀಸ ಠಾಣೆಯಲ್ಲಿ ಕಾನೂನು ಬಗ್ಗೆ ಅರಿವು ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಪಿಎಸ್ಐ ಚಂದ್ರಶೇಖರನಿರ್ಣೆ ಮಾತನಾಡಿ,

ಮಕ್ಕಳಲ್ಲಿನಭಯತೊಲಗಿಸಲು ತೆರೆದ ಮನೆ ಕಾರ್ಯಕ್ರಮ ಸಹಕಾರಿ ಯಾಗಲಿದೆ,

ಪೊಲೀಸ್ ಎಂದರೆ ಭಯ ಪಡುವ ಅಗತ್ಯವಿಲ್ಲ. ಸಮಾಜದಲ್ಲಿ ನಡೆಯುವ ಅಹಿತಕರ ಘಟನೆ ಸೇರಿದಂತೆ ಅಕ್ರಮ ಚಟುವಟಿಕೆಗಳ ಕುರಿತು ಪೊಲೀಸರಿಗೆ ಮಾಹಿತಿ ನೀಡಲು ಪ್ರತಿಯೊಬ್ಬ ನಾಗರೀಕನು ಸಹಕರಿಸಬೇಕು ಎಂದು ತಿಳಿಸಿದರು.

ಮಕ್ಕಳಿಗಾಗಿ ಇರುವ ಕಾನೂನುಗಳಾದ

ಬಾಲ್ಯ ವಿವಾಹ, ಪೋಕ್ಸ್, ಪೊಲೀಸ್ ವ್ಯವಸ್ಥೆ ಬಂದೂಕು, ಗನ್ ಬಳಕೆ, ಸಂಚಾರ ನಿಯಮಗಳು, ಮಾದಕ ದ್ರವ್ಯಗಳ ವ್ಯಸನದಿಂದ ಆಗುವ ದುಷ್ಪರಿಣಾಮಗಳು ಹಾಗೂ ಕಾನೂನು ಗರಿಷ್ಠ ಶಿಕ್ಷೆಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಿದರು.

ಎಎಸ್ಐಗಳಾದ ಉಮಾಜಿ, ವೀರಶೆಟ್ಟಿಪೊಲೀಸ್ ಸಿಬ್ಬಂದಿಗಳಾದ ಶಿವಾನಂದ ಪುಲಾರಿ, ಲೋಕೇಶ ತೆಲಂಗ, ಸಂತೋಷ ಪವಾರ, ನರೇಶ, ವಸಂತ ಮೇತ್ರೆ, ಶಿಕ್ಷಕರು, ಸಿದ್ದಮ್ಮಾ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಉಪಸ್ಥಿತರಿದ್ದರು.



ಬೀದರ: ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ ಅವರು ನಗರದ ಮೈಲೂರನಲ್ಲಿರುವ ಸರ್ಕಾರಿ ಪ್ರೌಢ ಶಾಲೆಗೆ ಭೇಟಿ ನೀಡಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

# ಮಾನ್ವಿ ತಾಲ್ಲೂಕಿನಲ್ಲಿ ನೆರವು ಸಂಸ್ಥೆಯ ನೂತನ ಕಚೇರಿ ಉದ್ಘಾಟನೆ



ಮಲ್ಲಮ್ಮ ನುಡಿ ವಾರ್ತೆ

ಮಾನ್ವಿ:ಫೆ.7:ಕಾರ್ಮಿಕರು ಸರಕಾರ ನೀಡುವ ಸೌಲಭ್ಯದಿಂದ ವಂಚಿತರಾಗಿದ್ದು ಸರಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳನ್ನು ಕಾರ್ಮಿಕರು ಸದ್ಬಳಕೆ ಮಾಡಿಕೊಳ್ಳ ಬೇಕೆಂದು ನೆರವು ಕಟ್ಟಡ ಮತ್ತು ಅಸಂಘಟಿತ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಅಶ್ವಥ ಟಿ ಮರಿಗೌಡ ಹೇಳಿದರು.

ಪಟ್ಟಣದ ಬಾಲಾಜಿ ಕಾಂಪ್ಲೆಕ್ಸ್ ಹತ್ತಿರ ಸಿಂಧನೂರು ಮೇನ್ ರೋಡ ಮಾನ್ವಿಯಲ್ಲಿ ನೆರವು ಕಟ್ಟಡ ಮತ್ತು ಅಸಂಘಟಿತ ಕಾರ್ಮಿಕರ ಸಂಘದ ನೂತನ ತಾಲ್ಲೂಕು ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಸೌಲಭ್ಯ ವಂಚಿತ ಕಾರ್ಮಿಕರನ್ನು ಗುರುತಿಸುವ ಕೆಲಸವನ್ನು ಸಂಘಟನೆ ಮಾಡುತ್ತಿದೆ. ಕಾರ್ಮಿಕರು ಸಂಘಟನೆ ಜೊತೆಗೆ ಕೈ ಜೋಡಿಸುವ ಮೂಲಕ ಕಾರ್ಮಿಕ ಕಾರ್ಡನಿಂದ ದೊರೆಯುವ ಮದುವೆ ಸಹಾಯಧನ, ಹೆರಿಗೆ ಸಹಾಯಧನ, ಶಿಷ್ಯವೇತನ, ಅಪಘಾತಪರಿಹಾರಸಹಾಯಧನ, ಶಸ್ತ್ರಚಿಕಿತ್ಸೆವೈದ್ಯಕೀಯ ಸಹಾಯ ಧನ, ಆರೋಗ್ಯ ಸೌಲಭ್ಯ, ಪಿಂಚಣಿ ಭಾಗ್ಯ ಇತ್ಯಾದಿ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಳ್ಳಬೇಕೆಂದುಹೇಳಿಹೆಚ್ಚಿನ ಮಾಹಿತಿ ಹಾಗೂ ಕಾರ್ಮಿಕರ ಕುಂದು ಕೊರತೆಗಳಿದ್ದಲ್ಲಿ ನೆರವು ಕಛೇರಿ ಸಂಪರ್ಕಿಸುವುದಾಗಿ ತಿಳಿಸಿದರು.ಮಾನ್ವಿ ತಾಲೂಕಿನ ಅಧ್ಯಕ್ಷರನ್ನಾಗಿ ರಮೇಶ್ ಕವಿತಾಳ, ಹಾಗೆ ರಾಯಚೂರು ಜಿಲ್ಲೆಯ ಕಾರ್ಯದರ್ಶಿಯನ್ನಾಗಿ ಈರಪ್ಪ ವಲ್ಕಂದಿನ್ನಿ, ರಾಯಚೂರು ಜಿಲ್ಲೆಯ ಉಪಾಧ್ಯಕ್ಷರಾಗಿ ಈರಣ್ಣರವರನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ನೆರವು ಸಂಸ್ಥೆಯ ರಾಮನಗರ ಜಿಲ್ಲಾ ಅಧ್ಯಕ್ಷರು ಬೋರೆಗೌಡ ಟಿ ಎಂ. ಮಂಡ್ಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್ ಹೆಚ್.ಸಿ, ಹುಣಸಗಿ ತಾಲ್ಲೂಕು ಅಧ್ಯಕ್ಷರು ಶಿವು ರಾಠೋಡ, ರಾಯಚೂರು ಜಿಲ್ಲಾ ಅಧ್ಯಕ್ಷರು ವೆಂಕಟೇಶರಾಠೋಡ, ಇಂಡಿಯಾ ಇಕ್ವಾಲಿಟಿ ಚಾನೆಲ್ ಪ್ರಾದೇಶಿಕ ಮುಖ್ಯಸ್ತರು ಶಿವ ಯಾದವ್, ಈರಪ್ಪ ಭೀಮಶಪ್ಪ ಪೂಜಾರಿ, ದೇವದುರ್ಗ ತಾಲ್ಲೂಕು ಅಧ್ಯಕ್ಷರು ಸಚಿನ ಪವಾರ, ರಾಯಚೂರು ತಾಲ್ಲೂಕು ಅಧ್ಯಕ್ಷರು ತಿಮ್ಮಪ್ಪ, ಸಿರವಾರ ತಾಲ್ಲೂಕು ಅಧ್ಯಕ್ಷರು ರವಿರಾಜ್, ಮೂಲ್ಕಿ ತಾಲ್ಲೂಕು ಅಧ್ಯಕ್ಷರು ಕುಮಾರ್ ಶೆಟ್ಟಿಗಾರ್, ಮಸ್ಕಿ ಕಾರ್ಯದರ್ಶಿ ಶಿವಕುಮಾರ್ ಚವಾಣ್ ಹಾಗೂ ಇನ್ನಿತರ ಪದಾಧಿಕಾರಿಗಳು, ಕಾರ್ಮಿಕರು ಸೇರಿದರು

## ಇಂದು ಕುಕನೂರನಲ್ಲಿ ಸಹಕಾರ ಸಂಘಗಳ ಜಾಗೃತಿ ಸಮಾವೇಶ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಫೆ.7: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ಬೆಂಗಳೂರು, ರಾಯಚೂರು, ಬಳ್ಳಾರಿ, ಕೊಪ್ಪಳ ಹಾಗೂ ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಕೊಪ್ಪಳ ಜಿಲ್ಲಾ ಸಹಕಾರಿ ಯೂನಿಯನ್, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಸಹಕಾರ ಇಲಾಖೆ ಹಾಗೂ ಕುಕುನೂರು ಮತ್ತು ಯಲಬುರ್ಗಾ ತಾಲ್ಲೂಕಿನ ವಿವಿಧ ಸಹಕಾರಿ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಸಹಕಾರ ಜಾಗೃತಿ ಸಮಾವೇಶ ಕಾರ್ಯಕ್ರಮವನ್ನು ಫೆಬ್ರವರಿ 8 ರಂದು ಬೆಳಿಗ್ಗೆ 10.30ಕ್ಕೆ ಕುಕನೂರಿನ ಎ.ಪಿ.ಎಂ.ಸಿ ಆವರಣದಲ್ಲಿ ಆಯೋಜಿಸಲಾಗಿದೆ.

ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಅವರ ಅಧ್ಯಕ್ಷತೆ ವಹಿಸುವರು.ಸಹಕಾರ ಸಚಿವರಾದ ಕೆ.ಎನ್.ರಾಜಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಸಂಗಪ್ಪ ತಂಗಡಗಿ ಅವರು ವಸ್ತು ಪ್ರದರ್ಶನ ಉದ್ಘಾಟಿಸುವರು. ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರವಾದ ಎಚ್.ಕೆ.ಪಾಟೀಲ ಅವರು ಸಹಕಾರ ವಾರಪತ್ರಿಕೆ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡುವರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿಯ ಅಧ್ಯಕ್ಷರು ಹಾಗೂ ಶಾಸಕರಾದ ಜಿ.ಟಿ.ದೇವೇಗೌಡ ಅವರು ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಿದ್ದಾರೆ.

## ತೋರಣಾ ಗ್ರಾಪಂಗೆ ನರೇಗಾ ಪುರಸ್ಕಾರ:ಸುನಿಲ ಶಿಗರೆ ಹರ್ಷ



ನಮ್ಮ ಗ್ರಾಮ ಪಂಚಾಯತನಲ್ಲಿ ಸರಕಾರದಿಂದ ಬರುವ ನರೇಗಾ ಯೋಜನೆಯ ಅಡಿ ಗ್ರಾಮದ ಅಭಿವೃದ್ಧಿ ಮಾಡುವುದೇ ನನ್ನ ಗುರಿಯಾಗಿತ್ತು. ಈ ದಿಕ್ಕಿನಲ್ಲಿ ಕಳೆದು ಮೂರು ವರ್ಷದಿಂದ ಉತ್ತಮ ಕಾರ್ಯ ಮಾಡುತ್ತ ಬಂದಿದೆ ಇದರಿಂದ ಗ್ರಾಮದ ಅಭಿವೃದ್ಧಿಯಾಗಿದು ಹಾಗೂ ಈ ಕಾರ್ಯ ನರೇಗಾ ಪ್ರಶಸ್ತಿ ದೊರಕ್ಕಿದು ಬಹಳ ಖುಷಿ ಕೊಟ್ಟಿದೆ.

**-ಸುನೀಲ ಶಿಗರೆ,**

**ಅಧ್ಯಕ್ಷರು, ಗ್ರಾಮ ಪಂಚಾಯತ ತೋರಣಾ.**


ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಫೆ.7:2023-24ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯಗ್ರಾಮೀಣಉದ್ಯೋಗ ಖಾತ್ರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದಕ್ಕಾಗಿ ತಾಲೂಕಿನ ಗಾಂಧಿ ಗ್ರಾಮ ಪುರಸ್ಕಾರತ ತೋರಣಾ ಪಂಚಾಯತಿಗೆ 'ನರೇಗಾ ಪ್ರಶಸ್ತಿ' ಪುರಸ್ಕಾರ ನೀಡಿ ಗೌರವಿಸಲಾಗಿದೆ.

ರಾಜ್ಯರಾಜಧಾನಿ ಬೆಂಗಳೂರಿನ ವಸಂತನಗರದ ಅಂಬೇಡ್ಕರ್ ಭವನದಲ್ಲಿಆಯೋಜಿಸಿದ್ದ 'ನರೇಗಾ ಹಬ್ಬ-2025' ಕಾರ್ಯಕ್ರಮದಲ್ಲಿ ಗ್ರಾಮೀಣಾಭಿವೃದ್ಧಿ,ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ತೋರಣಾ ಗ್ರಾಮ ಪಂಚಾಯತಿಗೆ ನರೇಗಾ ಪ್ರಶಸ್ತಿ ಪ್ರದಾನ ಮಾಡಿದರು.

ಕಮಲನಗರ ತಾಲೂಕ ಕಾರ್ಯನಿರ್ವಾಹಕ ಅಧಿಕಾರಿ ಮಾಣಿಕರಾವಪಾಟೀಲ,ತೋರಣಾ ಗ್ರಾಮ್ ಪಂಚಾಯತ ಅಭಿವೃದ್ಧಿ ಅಧಿಕಾರಿ ಮಲ್ಲೇಶ್ ಪಂಚಾಯತ್ ಅಧ್ಯಕ್ಷ ಸುನೀಲ ಶಿಗರೆ ಅವರು ಪ್ರಶಸ್ತಿ ಸ್ವೀಕರಿಸಿದರು. ಈ ವೇಳೆ ಗ್ರಾಪಂ ಸದಸ್ಯರುಗಳಾದ ಮಾಧವಭೋಸಲೆ,ರಾಜಕುಮಾರ ವನಮಾರೆ,ಶ್ರೀಧರಪಾಟೀಲ,ಧನಾಜಿ ಗಾಯಕವಾಡ,ವಿಜಯಕುಮಾರ ತೆಗಂಪೂರೆ,ಗ್ರಾಪಂ ಕಾರ್ಯದರ್ಶಿ ಸಂಜುಕುಮಾರ,ದೇವಿದಾಸ ಹೋನ್ನಾಳೆ,ಸಂಜುಕುಮಾರ ಶಿಗರೆ,ಸಂಜಯಬಿರಾದಾರ,ಸುಭಾಷ ರಾವ್‌ಲೆ, ಪ್ರವೀಣ ಶಿಗರೆ,ಗ್ರಾಪಂ ಸಿಬ್ಬಂದಿಗಳಾದ ರಾಜಕುಮಾರ,ಸಂಜುಕುಮಾರ ಬಾಕಲೆ ಇತರರು ಇದ್ದರು.

# ಇಂದು ಸಹಕಾರ ಸಚಿವ ಕೆ. ಎನ್.ರಾಜಣ್ಣ ಕೊಪ್ಪಳಕ್ಕೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಫೆ.7: ಸಹಕಾರ ಸಚಿವರಾದ ಕೆ.ಎನ್.ರಾಜಣ್ಣ ಅವರು ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಸಚಿವರು ಫೆ.8 ರಂದು ಬೆಳಿಗ್ಗೆ 9 ಗಂಟೆಗೆ ಹೊಸಪೇಟೆಯಿಂದ ಹೊರಟು,10.30ಕ್ಕೆ ಕೂಕನೂರಿಗೆ ಆಗಮಿಸಿ, ಎ.ಪಿ.ಎಂ.ಸಿ ಆವರಣದಲ್ಲಿ ನಡೆಯಲಿರುವ ಸಹಕಾರಜಾಗೃತಿಸಮಾವೇಶದಲ್ಲಿ ಭಾಗವಹಿಸುವರು. ನಂತರ ಅಂದು ಮಧ್ಯಾಹ್ನ 2 ಗಂಟೆಗೆ ಕುಕನೂರಿನಿಂದ ದಾವಣಗೆರೆಗೆ ಪ್ರಯಾಣ ಬೆಳೆಸುವರು ಎಂದು ಸಚಿವರ ವಿಶೇಷಕರ್ತವ್ಯಾಧಿಕಾರಿ ಜಿಎಸ್.ರಮಣರೆಡ್ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತಾಲೂಕಾಸ್ಪತ್ರೆಯಲ್ಲಿ ಸುಸಜ್ಜಿತ ಪ್ರಯೋಗಾಲಯ ಉದ್ಘಾಟನೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಫೆ.7:ಯಲಬುರ್ಗಾ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ನೂತನವಾಗಿ ನಿರ್ಮಿಸಿದ ಸಾರ್ವಜನಿಕ ಆರೋಗ್ಯಘಟಕದಸುಸಜ್ಜಿತವಾದ ಕಟ್ಟಡದಲ್ಲಿ ಪ್ರಯೋಗಾಲಯ ಉದ್ಘಾಟನೆ ಮಾಡಲಾಯಿತು.

ಈ ವೇಳೆಯಲ್ಲಿ ಆರೋಗ್ಯ ರಕ್ಷಾ ಸಮಿತಿಯ ಉಪಾಧ್ಯಕ್ಷ ಡಾ.ಶಿವನಗೌಡ ದಾನರೆಡ್ಡಿ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಉಳ್ಳಾಗಡ್ಡಿ ಅವರು ಚಾಲನೆ ನೀಡಿದರು.

ಈ ವೇಳೆಯಲ್ಲಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ಸರ್ವೇಕ್ಷಣಾಧಿಕಾರಿ ಡಾ. ನಂದಕುಮಾರ , ಆರ್ ಸಿ ಎಚ್ ಅಧಿಕಾರಿಗಳಾದ ಡಾ. ಪ್ರಕಾಶ್ ಹಾಗೂ ತಾಲೂಕು ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾದ ಡಾ.ಕೃಷ್ಣ ಹೊಟ್ಟಿ ಹಾಗೂ ತಾಲೂಕ ಆರೋಗ್ಯ ಅಧಿಕಾರಿ ಡಾ. ಅಮರೇಶ, ಯಲಬುರ್ಗಾ ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷರಾದ ಸುಧೀರ್ ಕೊರ್ಲಹಳ್ಳಿ , ಜಿಲ್ಲಾ ಸದಸ್ಯರಾದ ಮಲ್ಲಿಕಾರ್ಜುನ್ ಜಕ್ಲಿ, ಮುಖಂಡರಾದ ಹಂಪಯ್ಯ ಸ್ವಾಮಿ, ಹಾಗೂ ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಶಶಿಧರ್ ಉಳ್ಳಾಗಡ್ಡಿ, ಮುನಫ್ ಮಕಾನ್ದಾರ್, ವಿಎಸ್ ಶಿವಪ್ಪಯ್ಯನಮಠ, ಪ್ರಕಾಶ್ ಚಲವಾದಿ ಹಾಗೂ ಆಸ್ಪತ್ರೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು .

# ಶರಣ ಸಂಕುಲ ರಾಜ್ಯ ಪ್ರಶಸ್ತಿಗೆ ಈರಪ್ಪ ನಿಂಗೋಜಿ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಫೆ.7: ಜಿಲ್ಲೆಯ ಯಲಬುರ್ಗಾ ತಾಲೂಕಿನ ಕರಮುಡಿ ಗ್ರಾಮದ ಹಿರಿಯ ಸಾಹಿತಿ ಹಾಗೂ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ವೀರಪ್ಪ ಮಲ್ಲಪ್ಪ ನಿಂಗೋಜಿ ಯವರು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯವರು ಕೊಡಮಾಡಲ್ಪಡುವ "ಶರಣ ಸಂಕುಲ ರಾಜ್ಯ ಪ್ರಶಸ್ತಿ"ಗೆ ಆಯ್ಕೆಗೊಂಡಿದ್ದಾರೆ ಎಂದು ರಾಜ್ಯಾಧ್ಯಕ್ಷರಾದ ಕೊಟ್ರೇಶ ಉಪ್ಪಾರ ರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದೇ ಫೆ.ದಿ. 9 ರಂದು ಬೆ.11 ಘಂಟೆಗೆ ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ಜರುಗಲಿರುವ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಿಂಗೋಜಿ ರವರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ವೀರಪ್ಪ ನಿಂಗೋಜಿ ರವರು ಕಾವ್ಯ ? ಹನಿಗವನ ? ಚುಟುಕು ? ಆಧುನಿಕ ವಚನಗಳು ಶಾಯಿರಿಗಳು ಒಳಗೊಂಡಂತೆ ಸುಮಾರು 8 ಕೃತಿಗಳನ್ನು ಸ್ವತಂತ್ರವಾಗಿ ಪ್ರಕಟಿಸಿದ್ದಾರೆ . ಅವರು 2012–16ರ ಕಾಲಾವಧಿಯಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷರಾಗಿದ್ದಾಗ ಸುಮಾರು 7 ಸಂಪಾದಿತ ಕ್ರತಿಗಳನ್ನು ಪ್ರಕಟಿಸಿದ್ದಾರೆ.

ಟಂಕಾ ? ತನಗ ? ಪಂಚಪದಿ ? ಕತೆ ? ಲೇಖನಗಳು ? ನ್ಯಾನೋ ಕತೆ? ಅಬಾಬಿ ಚೋಕಾಗಳು ? ಹೀಗೆ ನಾನಾ ರೀತಿಯ ಸಾಹಿತ್ಯದ ರಚನೆ ಮಾಡಿರುವ ನಿಂಗೋಜಿರವರ ಸಾಹಿತ್ಯ ಕೃಷಿಗೆ ಸಂದ ಗೌರವ ಇದಾಗಿದೆ ಎಂದು ಹರ್ಷ ವ್ಯಕ್ತಪಡಿಸಿ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ಜಿಲ್ಲಾಧ್ಯಕ್ಷರಾದ ಅನುಸೂಯಾ ಜಹಾಗೀರದಾರ ರವರನ್ನು ಒಳಗೊಂಡಂತೆ ಅನೇಕ ಸಾಹಿತಿಗಳು ಹರ್ಷವ್ಯಕ್ತ ಪಡಿಸಿ ನಿಂಗೋಜಿ ರವರನ್ನು ಅಭಿನಂದಿಸಿದ್ದಾರೆ.

2012–15ರ ಕಾಲಾವಧಿಯಲ್ಲಿ ನಿಂಗೋಜಿ ರವರು ಜಿಲ್ಲಾ ಕಸಾಪ ಅಧ್ಯಕ್ಷರಾಗಿದ್ದಾಗ ಸುಮಾರು 15 ಸಮ್ಮೇಳನಗಳನ್ನು ಮಾಡಿದ್ದಾರೆ . ಹಾಗೇಯೆ ನವಂಬರ ತಿಂಗಳಿನಲ್ಲಿ 30 ದಿನ ಕಾರ್ಯಕ್ರಮವನ್ನು ಮೂರು ವರುಷ ಜಿಲ್ಲಾದ್ಯಂತ ನಡೆಸಿಕೊಂಡು ಬಂದ ಪ್ರಯುಕ್ತ ಚಂದನ ಟಿವಿ ಯ ಬೆಳಗು ಕಾರ್ಯಕ್ರಮದಲ್ಲಿ ಇವರ ಸಂದರ್ಶನ ಪ್ರಸಾರವಾಯಿತು

ನಿಂಗೋಜಿ ರವರಿಗೆ 2022ರಲ್ಲಿ ಪ್ರಕಟಗೊಂಡ "ಕರವೀರನ ಶಾಯಿರಿಗಳು" ಕ್ರತಿಗೆ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನಿಂದ "ನಾಕು ಗಣೇಶ ದತ್ತಿ ಪ್ರಶಸ್ತಿ ಲಭಿಸಿದೆ ಹಾಗೂ ಇವರು ಕರಮುಡಿಯ ಕರ್ನಾಟಕ ಯುವಕ ಮಂಡಳದ ಅಧ್ಯಕ್ಷರಾಗಿದ್ದಾಗ (1992) ಬೆಳಗಾವಿಯಲ್ಲಿ ಜರುಗಿದ ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ಹಾಗೂ ಬಳ್ಳಾರಿಯ ಮಕಸಂ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ಅತ್ಯುತ್ತಮ ನಟ ಪ್ರಶಸ್ತಿಗೆ ಭಾಜನರಾಗಿದ್ದಾರೆ. ನಿಂಗೋಜಿವರಿಗೆ ಪ್ರಶಸ್ತಿ ನೀಡುವ

ಇದೆ ಸಂದರ್ಭದಲ್ಲಿ ಬೆಳಗಾವಿಯ ಲೀಲಾ ರಾಜಪೂತ ? ಧಾರವಾಡದ ಶಿವಪ್ಪ ಶಾನವಾಡ ? ಉತ್ತರಕನ್ನಡದ ಆಶಾ ಶೆಟ್ಟಿ ಹಾಗೂ ಹಾಸನದ ಕೆ.ಆರ್.ಗಿರೀಶ ರವರಿಗೂ ಶರಣ ಸಂಕುಲ ರಾಜ್ಯ ಪ್ರಶಸ್ತಿ ನೀಡಲಾಗುವುದು ಎಂದು ಕೊಟ್ರೇಶರವರು ತಿಳಿಸಿದ್ದಾರೆ.

# ಫೆ.11 ರಂದು "ಅಂಬೇಡ್ಕರ್ ಓದು" ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಫೆ.07:ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರ ಬದುಕು ಮತ್ತು ಸಾಧನೆಗಳ ಪರಿಚಯ ಕುರಿತು ಫೆ.11 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ "ಅಂಬೇಡ್ಕರ್ ಓದು" ಎಂಬ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾಹಿತಿ ಹಾಗೂ ಬಾಬು ಜಗಜೀವನ್ ರಾಂ ಪ್ರಶಸ್ತಿ ಪುರಸ್ಕೃತರಾದ ಎನ್.ಡಿ.ವೆಂಕಮ್ಮ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಪದವಿ ಪೂರ್ವ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರಾದ ಎಂ.ಕಾತ್ಯಾಯಿನಿ ಮರಿದೇವಯ್ಯ ಅವರು ಅಧ್ಯಕ್ಷತೆ ವಹಿಸುವರು. ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ಗೋವಿಂದರಾಜ, ಸೇಂಟ್ ಜಾನ್ಸ್ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಹೆಚ್. ಎಸ್.ಶಿವರಾಂ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಸುಲೇಖಾ.ಬಿ., ಸರ್ಕಾರಿ (ಮಾಜಿ ಪುರಸಭೆ) ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಪಿ.ನಾಗೇಶ್ವರ ರಾವ್, ವಾಡ್ಲಾ ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ವಿಕ್ಟರ್ ಇಮ್ಯಾನುವೇಲ್ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಶ್ರೀ ಸತ್ಯಂ ಶಿಕ್ಷಣ ಮಹಾವಿದ್ಯಾಲಯ ಸಹಾಯಕ ಪ್ರಾಧ್ಯಾಪಕರಾದ ಅಲಂಭಾಷ ಅವರು ವಿಶೇಷ ಉಪನ್ಯಾಸ ನೀಡುವರು. ಇಬ್ರಾಹಿಂಪುರದ ಹುಲುಗಪ್ಪ ಎಸ್.ಎಂ ತಂಡದಿಂದ ಜಾನಪದ ಸಂಗೀತ ಪ್ರಸ್ತುತ ಪಡಿಸುವರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಪ್ರಬಂಧ, ರಸಪ್ರಶ್ನೆ, ಆಶುಭಾಷಣ, ಕವನ ವಾಚನ, ಸ್ಪರ್ಧೆಗಳಲ್ಲಿ ವಿಜೇತರಿಗೆ ಪುಸ್ತಕ ರೂಪದಲ್ಲಿ ಬಹುಮಾನ ವಿತರಣೆ ಮಾಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದ್ದಾರೆ.

# ಜಿಲ್ಲಾಡಳಿತದಿಂದ ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆ: ಎಡಿಸಿ ಮಹಮ್ಮದ್ ಝುಬೇರ್



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಫೆ.07:ಜಿಲ್ಲಾಡಳಿತದಿಂದ ಸಂತ ಸೇವಾಲಾಲ್, ಛತ್ರಪತಿ ಶಿವಾಜಿ ಮಹಾರಾಜ ಮತ್ತು ಸಂತಕವಿ ಸರ್ವಜ್ಞ ಜಯಂತಿ ಸೇರಿದಂತೆ ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ಹೇಳಿದರು.

ಶುಕ್ರವಾರದಂದು, ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಮಹನೀಯರ ಜಯಂತಿ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಫೆ.15 ರಂದು ಸಂತ ಸೇವಾಲಾಲ್ ಜಯಂತಿ, ಫೆ.19 ರಂದು ಸಂಜೆ ಛತ್ರಪತಿ ಶಿವಾಜಿ ಮಹಾರಾಜ ಜಯಂತಿ ಮತ್ತು ಫೆ.20 ರಂದು ಸಂತಕವಿ ಸರ್ವಜ್ಞ ಜಯಂತಿಯನ್ನು ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ಸಭಾಂಗಣದಲ್ಲಿ ಅರ್ಥಪೂರ್ಣ ಆಚರಣೆಗೆ ಕ್ರಮವಹಿಸಲಾಗುವುದು ಎಂದರು.

ಶ್ರೀ ಸಂತ ಸೇವಾಲಾಲ್, ಛತ್ರಪತಿ ಶಿವಾಜಿ ಮಹಾರಾಜ ಮತ್ತು ಸಂತಕವಿ ಸರ್ವಜ್ಞರ ಜಯಂತಿ ಕಾರ್ಯಕ್ರಮಗಳ ಅಂಗವಾಗಿ ಭವ್ಯವಾದ ಮೆರವಣಿಗೆ ನಡೆಯಲಿದ್ದು, ರಸ್ತೆ ಸಂಚಾರ ಮಾರ್ಗಕ್ಕೆ ವ್ಯವಸ್ಥೆ ಅಚ್ಚುಕಟ್ಟಾಗಿ ಮಾಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಯಂತಿ ಆಚರಣೆ ಸಂದರ್ಭದಲ್ಲಿ ಶಿಷ್ಟಾಚಾರ ಪಾಲನೆ, ಆಹ್ವಾನ ಪತ್ರಿಕೆ, ವಿಶೇಷ ಉಪನ್ಯಾಸ, ವಚನ ಗಾಯನ ಸೇರಿದಂತೆ ಎಲ್ಲವೂ ಸರಿಯಾಗಿ ನಿರ್ವಹಿಸಬೇಕು. ಅದೇ ರೀತಿ ವೇದಿಕೆ, ಕುಡಿಯುವ ನೀರು, ಸ್ವಚ್ಛತೆ ಮತ್ತು ಮೆರವಣಿಗೆ ಸಂದರ್ಭದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯು ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಮಹಾನ್ ವ್ಯಕ್ತಿಗಳ ವಿಚಾರಧಾರೆಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಅಗತ್ಯವಿದ್ದು, ಈ ನಿಟ್ಟಿನಲ್ಲಿ ನುರಿತ ಉಪನ್ಯಾಸಕರಿಂದ ವಿಶೇಷ ಉಪನ್ಯಾಸ ಆಯೋಜಿಸಲಾಗುವುದು ಎಂದರು.

ಜಯಂತಿ ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳನ್ನು ನಿಯೋಜಿಸಲಾಗುವುದು. ಸಮುದಾಯದಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಮತ್ತು ಪಿಹೆಚ್‌ಡಿ ಪದವಿ ಪಡೆದ ಅಭ್ಯರ್ಥಿಗಳಿದ್ದರೆ ಸನ್ಮಾನಿಸಲಾಗುವುದು ಎಂದರು.

ಜಯಂತಿ ಕಾರ್ಯಕ್ರಮಗಳಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸೂಚಿಸಿದರು.

ಸಭೆಯಲ್ಲಿ ವಿವಿಧ ಸಮುದಾಯದ ಮುಖಂಡರು, ಜನಪ್ರತಿನಿಧಿಗಳು ಜಯಂತಿಗಳ ಆಚರಣೆಯ ಕುರಿತು ತಮ್ಮ ಸಲಹೆ–ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ ಮಹನೀಯರ ಹೆಸರುಗಳನ್ನು ರಸ್ತೆ ಮತ್ತು ವೃತ್ತಗಳಿಗೆ ನಾಮಕರಣ ಮಾಡುವ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿದರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಮುದಾಯದ ಮುಖಂಡರು, ಜನ ಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಫೆ.13 ಲೋಕಾಯುಕ್ತರಿಂದ ಜನಸಂಪರ್ಕ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.7– ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಫೆಬ್ರವರಿ 13 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30ವರೆಗೆ ಬಾದಾಮಿ ತಾಲೂಕಾ ಪಂಚಾಯತ ಕಾರ್ಯಾಲಯದಲ್ಲಿ ಜನಸಂಪರ್ಕ ಸಭೆ ಹಮ್ಮಿಕೊಂಡಿದ್ದಾರೆ.

ಸಾರ್ವಜನಿಕರಿಗೆ ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳನ್ನು ಮಾಡಿಕೊಡುವಲ್ಲಿ ವಿನಾಕಾರಣ ವಿಳಂಬ ಹಾಗೂ ಇನ್ನಿತರ ತೊಂದರೆ ಆಗಿದ್ದರೆ ಅಂತಹ ಅಧಿಕಾರಿ ಮತ್ತು ನೌಕರರ ವಿರುದ್ದ ಸಾರ್ವಜನಿಕರು ಸಭೆಗೆ ಹಾಜರಾಗಿ ತಮ್ಮ ಲಿಖಿತ ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದಾಗಿದೆ.

ಸ್ಥಳದಲ್ಲಿ ಪರಿಹಾರ ಕಂಡುಕೊಳ್ಳಬಹುದಾದ ದೂರುಗಳನ್ನು ಅಲ್ಲಿನ ಸ್ಥಳೀಯ ಅಧಿಕಾರಿಗಳ ಸಹಯೋಗದೊಂದಿಗೆ ಇತ್ಯರ್ಥಪಡಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08354–236200 ಹಾಗೂ 295170ಗೆ ಸಂಪರ್ಕಿಸುವಂತೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಟಿ.ಮಲ್ಲೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರನ್ನವೈಭವ-ಇಂದು ಕಲಾವಿದರ ಸಭೆ

ಬಾಗಲಕೋಟೆ,ಫೆ.7–ಜಿಲ್ಲೆಯ ಮುಧೋಳದಲ್ಲಿ ನಡೆಯಲಿರುವ ರನ್ನವೈಭವ–2025 ಸಾಂಸ್ಕೃತಿಕ ಉತ್ಸವ ಆಯೋಜನೆಗಾಗಿ ಫೆಬ್ರವರಿ 8 ರಂದು ಸಂಜೆ 4 ಗಂಟೆಗೆ ಮುಧೋಳ ತಹಶೀಲ್ದಾರ ಕಾರ್ಯಾಲಯದಲ್ಲಿ ಕಲಾವಿದರು, ಸಾಹಿತಿಗಳ ಸಭೆ ಜರುಗಲಿದೆ.

ಈ ಸಭೆಗೆ ಕಲಾವಿದರು, ಸಾಹಿತಿಗಳು ಹಾಜರಾಗುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯುತ್ ಗ್ರಾಹಕರ ಕುಂದು ಕೊರತೆ ನಿವಾರಣೆಗೆ ವೇದಿಕೆ ರಚನೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.7– ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸುವ ನಿಟ್ಟಿನಲ್ಲಿ ಅಧ್ಯಕ್ಷರು ಹಾಗೂ ಇಬ್ಬರು ಸದಸ್ಯರನ್ನೊಳಗೊಂಡ ನವನಗರದ ಸೆಕ್ಟರ ನಂ.63, ಜಿ.ಎಸ್.ಟಿ ಆಫೀಸ್ ಹತ್ತಿರವಿರುವ ಅಧೀಕ್ಷಕ ಇಂಜಿನೀಯರ್, ಕಾರ್ಯ ಮತ್ತು ಪಾಲನೆ ವೃತ್ತ ಹೆಸ್ಕಾಂ ಕಚೇರಿಯ ಕೇಂದ್ರ ಸ್ಥಾನದಲ್ಲಿ ಕುಂದು ಕೊರತೆಗಳ ನಿವಾರಣಾ ವೇದಿಕೆ ರಚಿಸಲಾಗಿದೆ.

ವಿದ್ಯುತ್ ಗ್ರಾಹಕರು ತಮ್ಮ ಕುಂದು ಕೊರತೆಗಳು ಇದ್ದಲ್ಲಿ ಅರ್ಜಿ ನಮೂನೆ ಎ ದಲ್ಲಿ ಸಂಬಂಧಿಸಿದ ಕ್ಷೇತ್ರಾಧಿಕಾರಿಗಳಿಗೆ ಸಲ್ಲಿಸಬಹುದಾಗಿದೆ.

ವೇದಿಕೆಯ ಅಧ್ಯಕ್ಷರಾಗಿ ಬಾಗಲಕೋಟೆ ಹೆಸ್ಕಾಂ ಅಧೀಕ್ಷಕ ಅಭಿಯಂತರ ಸಿ.ಬಿ.ಯಂಕಂಚಿ (9448370248), ಸದಸ್ಯರಾಗಿ ಕಾರ್ಯನಿರ್ವಾಹಕ ಅಭಿಯಂತರ ಖಲೀಮ ಅಹಮದ್ (9448370258), ಎ.ಬಿ.ಸಿದ್ದನಗೌಡ ಕಾರ್ಯನಿರ್ವಹಿಸಲಿದ್ದಾರೆ.

ಕುಂದು ಕೊರತೆಗಳನ್ನು ವೈಯಕ್ತಿಕವಾಗಿ ಇಲ್ಲವೇ ಅಂಚೆ ಮೂಲಕವೂ ಕಳುಹಿಸಬಹುದಾಗಿದೆ. ಎಲೆಕ್ಟ್ರಿಸಿಟಿ ಆಕ್ಟ 2003ರ ಸಕ್ಷನ್ 126ರ ಪ್ರಕಾರ ಅನಧಿಕೃತವಾಗಿ ವಿದ್ಯುಚ್ಛಕ್ತಿ ಬಳಕೆ, ಸೆಕ್ಷನ್ 135 ರಿಂದ 139ರ ಪ್ರಕಾರ ಅಪರಾಧಿಗಳು ಮತ್ತು ದಂಡ, ಸೆಕ್ಷನ್ 161ರ ಪ್ರಕಾರ ವಿದ್ಯುಚ್ಛಕ್ತಿ ಸರಬರಾಜು ಹಾಗೂ ಪೂರೈಕೆಯಲ್ಲಿ ಸಂಬಂಧಿಸಿದ ಅಪಘಾತಗಳನ್ನು ಹೊರತುಪಡಿಸಿ ವಿದ್ಯುತ್ ಸರಬರಾಜು ಕುರಿತಂತೆ ಗ್ರಾಹಕರು ದೂರು ಸಲ್ಲಿಸಬಹುದು.

ಗ್ರಾಹಕರ ಕುಂದುಕೊರತೆ ವೇದಿಕೆಯಿಂದ ನೀಡಲಾದ ತೀರ್ಪಿನ ಕುರಿತು ಗ್ರಾಹಕರು ಅತೃಪ್ತಿ ಹೊಂದಿದ್ದಲ್ಲಿ ತೀರ್ಪಿನ ದಿನಾಂಕದ 30 ದಿನಗಳ ಒಳಗಾಗಿ ಆಯೋಗದಿಂದ ಸ್ಥಾಪಿಸಲಾಗಿರುವ ಒಂಬಡ್ಸಮನ್‌ರಾದ ವಿದ್ಯುತ್‌ಚ್ಛಕ್ತಿ ಲೋಕಪಾಲಕರು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ನಂ.16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು–560052 ಇವರಿಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಬಾಗಲಕೋಟೆ ಹೆಸ್ಕಾಂ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೂತನ ಮೂರ್ತಿಗಳ ಭವ್ಯ ಮೆರವಣಿಗೆ, ಕುಂಭಮೇಳ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.7–ಸಮೀಪದ ಮುರನಾಳ ಗ್ರಾಮದಲ್ಲಿ ಶ್ರೀ ಮಳೆರಾಜೇಂದ್ರಸ್ವಾಮಿ ಮಠದ ಆವರಣದಲ್ಲಿ ಪ್ರತಿಷ್ಠಾಪಿಸಲಾಗುತ್ತಿರುವ ಈಶ್ವರ, ಆಂಜನೇಯ, ನಾಗದೇವರ ಮೂರ್ತಿಗಳ ಭವ್ಯ ಮೆರವಣಿಗೆ ಶುಕ್ರವಾರ ಮಹಿಳೆಯರ ಕುಂಭಮೇಳದೊಂದಿಗೆ ಅದ್ದೂರಿಯಾಗಿ ಜರುಗಿತು.

ನಗರದ ಬಿಟಿಡಿಎ ಕಚೇರಿ ಬಳಿಯಿಂದ ಪ್ರಾರಂಭವಾದ ಮೆರವಣಿಗೆ ಮಠದ ಪೂಜ್ಯರಾದ ಬ್ರಹ್ಮಾನಂದ ಮಹಾಸ್ವಾಮಿಗಳು ಹಾಗೂ ಚಿದಾನಂದ ಮಹಾಸ್ವಾಮಿಗಳ ನೇತೃತ್ವದಲ್ಲಿ ಹಳೆ ಮುರನಾಳ ಗ್ರಾಮದವರೆಗೂ ಡೊಳ್ಳು ಮೇಳ, ಮಹಿಳೆಯರ ಆರತಿ ಸೇವೆಯೊಂದಿಗೆ ವಿಜೃಂಭಣೆಯಿಂದ ಸಾಗಿಬಂತು.

ಮೆರವಣಿಗೆಯಲ್ಲಿ ಗ್ರಾಮದ ಗುರು ಹಿರಿಯರು, ಮಹಿಳೆಯರು, ಯುವಕರು, ಸಕಲ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪುನರ್ ನಿರ್ಮಾಣವಾಗಿರುವ ಮಳೆರಾಜೇಂದ್ರಸ್ವಾಮಿ ಮಠದ ಆವರಣದಲ್ಲಿ ಫೆ.8 ಹಾಗೂ 9 ರಂದು ಪೂಜಾ ಹಾಗೂ ವಾಸಾದಿಗಳ ಕಾರ್ಯಕ್ರಮ ಜರುಗಲಿದ್ದು, ಫೆ. 10 ರಂದು ಸೋಮವಾರ ಬೆಳಗಿನ ಜಾವ ಸಕಲ ಪೂಜೆ, ಹೋಮ, ಜಪ, ತಪಗಳೊಂದಿಗೆ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ನಡೆಯಲಿದೆ.

# ವಿದ್ಯಾರ್ಥಿಗಳಿಗೆ ಗುರಿ ಸಾಧಿಸುವ ಹಸಿವು ಇರಬೇಕು




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.7– ಸಾಧನೆಗೆ ಬಡತನ ಎಂದೂ ಅಡ್ಡಿಯಾಗಲಾರದು. ಸಾಧನೆ ಎನ್ನುವುದು ನಿರಂತರ ಶ್ರದ್ಧೆ, ಪರಿಶ್ರಮದ ಸ್ವತ್ತಾಗಿದೆ. ಗುರಿ ಸಾಧನೆಯ ಹಸಿವು ಇದ್ದಾಗ ಉತ್ತಮ ಸಾಧಕ ರೂಪಗೊಳ್ಳುತ್ತಾನೆ ಎಂದು ಜಿಲ್ಲಾ ಅಗ್ನಿಶಾಮಕ ದಳದ ಅಧಿಕಾರಿ ಪ್ರಕಾಶ ಪವಾರ ಹೇಳಿದರು.

ತಾಲೂಕಿನ ಬೇವೂರು ಗ್ರಾಮದ ಆದರ್ಶ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಶುಕ್ರವಾರ ನಡೆದ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು. ನಮ್ಮ ಜೀವನದ ನಿಜ ನಾಯಕರು ತಂದೆ ತಾಯಿಗಳು ಮತ್ತು ಗುರುಗಳು. ಸದಾ ನಾವು ಅವರನ್ನು ಸ್ಮರಣೆ ಮಾಡಿ, ಉತ್ತಮ ನಾಗರಿಕರಾಗಿ ಬೆಳೆದು ಅವರಿಗೆ ಗೌರವ ತರುವ ಕೆಲಸ ಮಾಡಬೇಕು ಎಂದರು.

ಅಧ್ಯಕ್ಷತೆವಹಿಸಿ ಮಾತನಾಡಿದ ಸಂಸ್ಥೆಯ ಸದಸ್ಯ ಪಿ.ಬಿ.ಹೊಸಳ್ಳಿ ಮಾತನಾಡಿ ನಾವೆಲ್ಲರೂ ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ. ಪ್ರತಿಯೊಬ್ಬರೂ ಉನ್ನತ ಆಲೋಚನೆ, ದೃಷ್ಟಿಕೋನ, ಉನ್ನತ ಗುರಿಗಳನ್ನು ಅಳವಡಿಸಿಕೊಳ್ಳಬೇಕು. ಆದರ್ಶದಾಯಕ ಶಿಸ್ತುಬದ್ಧ ಜೀವನವನ್ನು ರೂಪಿಸಿಕೊಂಡು ಜವಾಬ್ದಾರಿಯುತ ನಾಗರಿಕರಾಗಿ ಬೆಳೆಯಬೇಕು ಎಂದು ಹೇಳಿದರು.

ಮಹಾವಿದ್ಯಾಲಯದ ಪ್ರಾಚಾರ್ಯ ವಿ.ಬಿ.ಅರಹುಣಸಿ, ಮುಖ್ಯ ಗುರು ಯೋಗೇಶ ಲಮಾಣಿ, ಆದರ್ಶ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಮಂಡಳಿಯ ಸದಸ್ಯರಾದ ಎಫ್.ಜಿ.ಕೇಶಣ್ಣವರ, ಎಸ್.ಎಮ್.ಹೊಟ್ಟಿಗೌಡರ, ವ್ಹಿ. ಪಿ.ತುರುಡಗಿ, ಎನ್. ಎಸ್.ಹುನಗುಂದ, ನಿವೃತ್ತ ಶಿಕ್ಷಕ ಎಸ್.ಎಸ್.ಜಿಗಳೂರ, ಉಪನ್ಯಾಸಕ ಜೆ.ಕೆ.ಮಲ್ಲಾಪೂರ, ಎಸ್.ಎನ್.ಬಾರ್ಕಿ, ಶಿಕ್ಷಕ ಪ್ರಕಾಶ ತಳವಾರ, ಉಪನ್ಯಾಸಕಿ ಎಸ್.ಕೆ.ಮಾಡೋಳ್ಳಿ, ರೇಷ್ಮಾ ಧನ್ನೂರ, ಗೋಪಾಲ ಚಿಲ್ಲಾಪೂರ, ಏಕನಾಥ ರಾಠೋಡ ಸೇರಿದಂತೆ ವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ವಿಭಾಗದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು.

# ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಪ್ರವಾಸ

ಕಲಬುರಗಿ,ಫೆ.07:ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ ಅವರು ಬೆಂಗಳೂರಿನಿಂದ ವಿಮಾನದ ಮೂಲಕ ಫೆಬ್ರವರಿ 9 ರಂದು ಭಾನುವಾರ ರಾತ್ರಿ 8.50 ಗಂಟೆಗೆ ಕಲಬುರಗಿಗೆ ಆಗಮಿಸಿ ವಾಸ್ತವ್ಯ ಮಾಡುವರು. ಫೆಬ್ರವರಿ 10 ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಸೇಡಂ ಪಿ.ಎಲ್.ಡಿ. ಬ್ಯಾಂಕಿನ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸಿ ಕಲಬುರಗಿಯಲ್ಲಿ ವಾಸ್ತವ್ಯ ಮಾಡುವರು. ಫೆಬ್ರವರಿ 11 ರಂದು ಕಲಬುರಗಿಯಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ವಾಸ್ತವ್ಯ ಮಾಡುವರು.

## 7ದಿನಗಳೊಳಗೆ ಮಾಹಿತಿ ಸಲ್ಲಿಸಲು ಸೂಚನೆ

ಮಲ್ಲಮ್ಮ ನುಡಿ ವಾರ್ತೆ ರಾಯಚೂರು. ಫೆ.07: ಇಲ್ಲಿನ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ 2024–25ನೇ ಸಾಲಿನ ಲೆಕ್ಕಪರಿಶೋಧನೆಗಾಗಿ ವಾರ್ಷಿಕ ಮಹಾಸಭೆಯಲ್ಲಿ ಲೆಕ್ಕಪರಿಶೋಧಕರ ನೇಮಕಾತಿ ಮಾಡಿಕೊಂಡಿರುವ ಬಗ್ಗೆ ತಕ್ಷಣ ವಿಳಂಬಕ್ಕೆ ಅವಕಾಶ ನೀಡದೇ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಅಧ್ಯಕ್ಷರ ರುಜುವಿನೊಂದಿಗೆ ವಾರ್ಷಿಕ ಮಹಾಸಭೆಯ ನಡವಳಿಯೊಂದಿಗೆ ಮಾಹಿತಿಯನ್ನು 7 ದಿನಗಳೊಳಗಾಗಿ ಸಲ್ಲಿಸಬೇಕು.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ನಿಯಮ 29–ಬಿ(8) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ನಿಯಮ 8–ಬಿ(8) ಅನ್ವಯ ಇಲಾಖೆಯ ರಾಯಚೂರು ಜಿಲ್ಲಾ ಉಪ ನಿರ್ದೇಶಕರ ಕಚೇರಿಗೆ ವಾರ್ಷಿಕ ಸಭೆ ಜರುಗಿಸಿದ

7 ದಿನಗಳೊಳಗಾಗಿ ಸಲ್ಲಿಸಬೇಕಾಗಿತ್ತು, ಆದ–ರೇ, ಇನ್ನು ಬಹಳಷ್ಟು ಸಹಕಾರ ಸಂಘಗಳ ಮತ್ತು ಸೌಹಾರ್ದ ಸಹಕಾರಿಗಳ

ಆಡಳಿತ ಮಂಡಳಿಗಳು ಇಲ್ಲಿಯವರೆಗೆ ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ ಮಾಹಿತಿ ಸಲ್ಲಿಸಿರುವುದಿಲ್ಲ. 2024–25ನೇ ಸಾಲಿನ ಲೆಕ್ಕಪರಿಶೋಧನೆಗಾಗಿ ವಾರ್ಷಿಕ ಮಹಾಸಭೆಯಲ್ಲಿ ಲೆಕ್ಕಪರಿಶೋಧಕರ ನೇಮಕಾತಿ ಮಾಡಿಕೊಂಡಿರುವ ಬಗ್ಗೆ ತಕ್ಷಣ ವಿಳಂಬಕ್ಕೆ ಅವಕಾಶ ನೀಡದೇ ಮಾಹಿತಿಯನ್ನು ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 6361686143ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಮಿತಿ ಸದಸ್ಯರ ನೇಮಕಾತಿಗೆ ಅರ್ಜಿ ಆಹ್ವಾನ

ರಾಯಚೂರು. ಫೆ 07: ಇಲ್ಲಿನ ಸಮಾಜ ಕಲ್ಯಾಣ ಇಲಾಖೆಯಿಂದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ–2013ರ ಕಾಯ್ದೆಯಡಿ ಜಿಲ್ಲೆಯ ಸಫಾಯಿ ಕರ್ಮಚಾರಿಗಳ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯಲ್ಲಿ ಸದಸ್ಯರನ್ನಾಗಿ ನೇಮಕ ಮಾಡಲು ಅರ್ಹರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಆಸಕ್ತಿಯುಳ್ಳವರು ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಯೋಡೆಟಾದೊಂದಿಗೆ ಅರ್ಜಿಯನ್ನು ಫೆ.15ರೊಳಗಾಗಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರ ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫೆ.11ರಂದು ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಗಾರ: ಎಸಿ ಗಜಾನನ ಬಾಳೆ




ಮಲ್ಲಮ್ಮ ನುಡಿ ವಾರ್ತೆ ರಾಯಚೂರು. ಫೆ.07: ಇಲ್ಲಿನ ಜಿಲ್ಲಾಡಳಿತದ ವತಿಯಿಂದ ಫೆ.11ರಂದು ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಒಂದುದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದ್ದು, ಸ್ಪರ್ಧಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಾಗಾರದ ಸದುಪಯೋಗಪಡಿಸಿಕೊಳ್ಳಬೇಕೆಂದ ು ರಾಯಚೂರು ವಿಭಾಗದ ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರು ಹೇಳಿದರು.

ಫೆ.07ರ ಶುಕ್ರವಾರ ದಂದು ನಗರದ ಪತ್ರಿಕಾ ಭವನದಲ್ಲಿ ಪ್ರತಿಕಾಗೊಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿ, ಕಾರ್ಯಗಾರದಲ್ಲಿ ಐ.ಎ.ಎಸ್, ಕೆ.ಎ.ಎಸ್,ಪಿ.ಎಸ್.ಐ,ಪಿ.ಡಿ.ಓ, ಆರ್.ಆರ್.ಬಿ, ಎಸ್.ಎಸ್.ಸಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಜಿಲ್ಲೆಯ ಐಎಎಸ್ ಮತ್ತು ಕೆಎಎಸ್ ಅಧಿಕಾರಿಗಳು ಮಾರ್ಗದರ್ಶನ ಮಾಡಲಿದ್ದಾರೆ. ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಕೋಚಿಂಗ್ ಸೆಂಟರಗಳು ಭಾಗವಹಿಸುತ್ತಿದ್ದು, ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪುಸ್ತಕ ಮಳಿಗೆಗಳನ್ನು ಹಾಕಲಾಗುವುದು. ಪುಸ್ತಕಗಳು ರಿಯಾಯಿತಿ ದರದಲ್ಲಿ ದೊರೆಯುತ್ತವೆ ಎಂದರು. ಇದೇ ಸಂದರ್ಭದಲ್ಲಿ ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ, ರಾಯಚೂರು ಗ್ರೇಡ್–2 ತಹಶೀಲ್ದಾರ್ ಭೀಮರಾಯ, ಎಸ್.ಕೆ.ಇ ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಚಾರ್ಯರರಾದ ಡಾ.ಬಾಬುರಾವ್ ಎಂ.ಶೇಗುಣಿಸಿ ಸೇರಿದಂತೆ ಇತರರು ಇದ್ದರು.

## ಸಿರುಗುಪ್ಪ: ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಕಾನೂನುಗಳ ಕುರಿತು ಜಾಗೃತಿ



ಬಳ್ಳಾರಿ,ಫೆ.07:ಸಿರುಗುಪ್ಪ ತಾಲ್ಲೂಕಿನ ಕರೂರು ಗ್ರಾಮದ ಸರ್ಕಾರಿ ಪ್ರೌಢ ಶಾಲೆ ಮತ್ತು ಕುರಿಗನೂರು ಡಾ.ಬಿ.ಆರ್. ಅಂಬೇಡ್ಕರ್ ವಸತಿ ನಿಲಯದ ಮಕ್ಕಳಿಗೆ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಕಾನೂನುಗಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಶುಕ್ರವಾರ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆನಾಗಪ್ಪ ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು ಮಕ್ಕಳ ರಕ್ಷಣೆ ಮತ್ತು ಪೋಷಣೆ ನಮ್ಮೆಲರ ಹೊಣೆಯಾಗಿದ್ದು, ಮಕ್ಕಳನ್ನು ಬಾಲ್ಯವಿವಾಹ, ಬಾಲಕಾರ್ಮಿಕ, ಭಿಕ್ಷಾಟನೆ, ಲೈಂಗಿಕ ಕಿರುಕುಳದಿಂದ ಮತ್ತು ಇನ್ನಿತರೆ ಸಂಕಷ್ಟಕ್ಕೆ ಒಳಗಾದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಅಂತಹ ಸಮಸ್ಯೆಗಳು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ ಸಂ–ಖ್ಯೆ 1098 ಅಥವಾ 112 ಗೆ ಕರೆ ಮಾಡಿ ತಿಳಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯ ಮಂಜುನಾಥ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಬಾಗವಹಿಸಿ, ಬಾಲ್ಯವಿವಾಹಕ್ಕೆ ಕಾರಣ, ದುಷ್ಪರಿಣಾಮ ಮತ್ತು ಕಾಯ್ದೆ–ಕಾನೂನು ಕುರಿತು ತಿಳಿಸಿದರು. ಕಾನೂನು ಪರಿವೀಕ್ಷಣಾಧಿಕಾರಿ ಈಶ್ವರ್ ರಾವ್ ಅವರು, ಪೋಕ್ಸೋ ಕಾಯ್ದೆ ಹಾಗೂ ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶ ಕುರಿತು ಸಂಪೂರ್ಣ ಮಾಹಿತಿ ನೀಡಿದರು. ಆರೋಗ್ಯ ಇಲಾಖೆಯ ಆರೋಗ್ಯ ನಿರೀಕ್ಷಕ ಜಿ.ಯಂಕಪ್ಪ ಅವರು ಹೆಣ್ಣು ಮಕ್ಕಳ ಸುರಕ್ಷತೆ ಮತ್ತು ಆರೋಗ್ಯ ನೈರ್ಮಲ್ಯ ಕುರಿತು ಮಾಹಿತಿ ನೀಡಿದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಯೋಜನೆಗಳ ಕುರಿತು ಮಕ್ಕಳ ರಕ್ಷಣಾಧಿಕಾರಿ (ಆಸಾಂಸ್ಥಿಕ ಸೇವೆ) ಚನ್ನಬಸಪ್ಪ ಪಾಟೀಲ್ ಅವರು ಮಾಹಿತಿ ವಿವರಿಸಿದರು.

ಈ ಸಂದರ್ಭದಲ್ಲಿ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮೋಹನ್ ಎಸ್.ಕಾಳಪ್ಪ, ಶಾಲೆಯ ಮುಖ್ಯ ಗುರುಗಳಾದ ಭಾಗ್ಯಮ್ಮ, ಬಿ.ಆರ್.ಪಿ ಸದಾನಂದಚಾರ್ಯ, ತಾಲೂಕು ಪರಿಶಿಷ್ಠ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಮಹೇಶ್ ಕುಮಾರ್, ಹಿರಿಯ ಮೇಲ್ವಿಚಾರಕರಾದ ಹೇಮಾವತಿ, ವಸತಿ ನಿಲಯದ ಪ್ರಾಂಶುಪಾಲರಾದ ಕಾಸಿಂ ಸಾಹೇಬ್.ಪಿ ಹಾಗೂ ವಸತಿ ನಿಲಯದ ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳು ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕೆ.ಕೆ.ಆರ್.ಟಿ.ಸಿ ಕೇಂದ್ರ ಕಚೇರಿಗೆ ವಾಯುವ್ಯ ಸಾರಿಗೆ ಸಂಸ್ಥೆ ಉಪಾಧ್ಯಕ್ಷರ ಭೇಟಿ:

# ಸಂಸ್ಥೆಗಳ ಕಾರ್ಯಚಟುವಟಿಕೆ ಕುರಿತು ಪರಸ್ಪರ ಚರ್ಚೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಫೆ.7:ವಾಯವ್ಯ ಕರ್ನಾಟಕರಸ್ತೆಸಾರಿಗೆಸಂಸ್ಥೆಯ ಉಪಾಧ್ಯಕ್ಷಪೀರಸಾಬ್ ಕೌತಾಳ ಅವರು ಗುರುವಾರ ಇಲ್ಲಿನ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕೇಂದ್ರ ಕಛೇರಿಗೆ ಭೇಟಿ ನೀಡಿ ಸಾರಿಗೆ ಸಂಸ್ಥೆಯ ಚಟುವಟಿಕೆ ಕುರಿತು ಮಾಹಿತಿ ಪಡೆದುಕೊಂಡರು.

ಕೆ.ಕೆ.ಆರ್.ಟಿ.ಸಿ ನಿಗಮದ ಕಾರ್ಯಾಚರಣೆ, ಸಾರಿಗೆ–ಯೇತರ ಆದಾಯ, ಶಕ್ತಿ ಯೋಜನೆ ಹಾಗೂ ಇತರೆ ಹೊಸ ಯೋಜನೆಗಳ ಬಗ್ಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಚಪ್ಪ ಎಂ. ಹಾಗೂ ಇತರೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದಲ್ಲದೆ ತಮ್ಮ ವಾಯವ್ಯ ಸಂಸ್ಥೆಯ ಮಾಹಿತಿ ಸಹ ಹಂಚಿಕೊಂಡರು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಪ್ರಗತಿಯ ಬಗ್ಗೆ ಪೀರಸಾಬ್ ಕೌತಾಳ ಅವರು ಹರ್ಷ ವ್ಯಕ್ತಪಡಿಸಿ, ರಾಜ್ಯದ ಸಾರಿಗೆ ನಿಗಮಗಳು ಪ್ರಯಾಣಿಕರಿಗೆ ಮತ್ತಷ್ಟು ಸಾರಿಗೆ ಸೌಲಭ್ಯ ಉತ್ತಮಗೊಳಿಸಲು ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಂಡಲ್ಲಿ ಇನ್ನು ಹೆಚ್ಚಿನ ಪ್ರಗತಿ ಸಾಧಿಸಬಹುದೆಂದು ಅಭಿಪ್ರಾಯಪಟ್ಟರು. ಇನ್ನು ಶುಕ್ರವಾರ ಹುಮನಾಬಾದ್ ಚಾಲನಾ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿ ನಡೆಯುತ್ತಿರುವ ವಾ.ಕ.ರ.ಸಾ.ಸಂಸ್ಥೆಯ ಚಾಲನಾ ಸಿಬ್ಬಂದಿಗಳ ಗಣಕೀಕೃತ ಆಧಾರಿತ ವೃತ್ತಿ ಚಾಲನಾ ಪರೀಕ್ಷೆಯನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಹಿರಿಯ ಅಧಿಕಾರಿಗಳು ಹಾಜರಿದ್ದರು.

## ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ,ಫೆ.07:ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸೋಮಣ್ಣ ಬೇವಿನಮರದ ಅವರು ಬೆಂಗಳೂರಿನಿಂದ ಕಾರಿನ ಮೂಲಕ ಫೆಬ್ರವರಿ 9 ರಂದು ಭಾನುವಾರ ರಾತ್ರಿ 10 ಗಂಟೆಗೆ ಕಲಬುರಗಿಗೆ ಆಗಮಿಸಿ ವಾಸ್ತವ್ಯ ಮಾಡುವರು.

ಫೆಬ್ರವರಿ10ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾದಿಕಾರದಿಂದ ನೀಡಲಾದ ಅನುದಾನಕ್ಕೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ನಂತರ ಮಧ್ಯಾಹ್ನ 1.30 ಗಂಟೆಗೆ ಕಲಬುರಗಿಯಿಂದ ರಸ್ತೆ ಮೂಲಕ ಬೀದರಿಗೆ ಪ್ರಯಾಣಿಸುವರು.

ಫೆಬ್ರವರಿ11ರಂದು ಮಂಗಳವಾರ ಯಾದಗಿರಿಯಿಂದ ಮಹಾರಾಷ್ಟ್ರ ರಾಜ್ಯದ ಅಕ್ಕಲಕೋಟ್‌ಗೆ ಕಾರಿನ ಮೂಲಕ ಪ್ರಯಾಣಿಸಿ, ಸಂಜೆ 4.30 ಗಂಟೆಗೆ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಅನುದಾನ ನೀಡಲಾದ ಅಕ್ಕಲಕೋಟ್ ಸಮುದಾಯ ಭವನ ಕಾಮಗಾರಿ ಪರಿವೀಕ್ಷಣೆ ಮಾಡುವರು. ರಾತ್ರಿ10 ಗಂಟೆಗೆ ಅಕ್ಕಲಕೋಟ್‌ದಿಂದ ಕಲಬುರಗಿಗೆ ಮರಳಿ ಆಗಮಿಸಿ ವಾಸ್ತವ್ಯ ಮಾಡುವರು. ಫೆಬ್ರವರಿ 12 ರಂದು ಬೆಳಿಗ್ಗೆ 9 ಗಂಟೆಗೆ ಕಲಬುರಗಿಯಿಂದ ಬೆಂಗಳೂರಿಗೆ ಪ್ರಯಾಣಿಸುವರು.

## ಸುರಪುರ ತಾಲ್ಲೂಕಿನ ತಿಂಥಣಿ ಜಾತ್ರೆಗೆ ವಿಶೇಷ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ: ಫೆ.07: ಜಿಲ್ಲೆಯ ತಿಂಥಣಿ ಜಾತ್ರೆಗೆ ಯಾದಗಿರಿ ವಿಭಾಗ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ವಿಶೇಷ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಕಲ್ಪಿಸಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಸುನೀಲ್‌ಕುಮಾರ ಹ.ಚಂದರಗಿ ಅವರು ತಿಳಿಸಿದ್ದಾರೆ.

ಸುರಪುರ ತಾಲ್ಲೂಕಿನ ತಿಂಥಣಿ ಶ್ರೀ ಮೌನೇಶ್ವರ ದೇವರ ಜಾತ್ರೆಗೆ ಬರುವ ಭಕ್ತಾದಿ ಪ್ರಯಾಣಿಕರ ಸಾರಿಗೆ ಅನುಕೂಲಕ್ಕಾಗಿ 2025ರ ಫೆಬ್ರವರಿ 10 ರಿಂದ 15ರ ವರೆಗೆ ಯಾದಗಿರಿ ವಿಭಾಗದಿಂದ ವಿಶೇಷ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಲಾಗಿರುತ್ತದೆ. ಈ ವಿಶೇಷ ಬಸ್‌ಗಳು ಯಾದಗಿರಿ, ಶಹಾಪೂರ, ಸುರಪುರ, ಗುರುಮಠಕಲ್, ಕಲಬುರಗಿ, ತಾಳಿಕೋಟಿ, ವಿಜಯಪುರ, ಮುದ್ದೇಬಿಹಾಳ, ನಾರಾಯಣಪೂರ, ಹುಣಸಗಿ, ಕೆಂಭಾವಿ, ಸಿಂಧಗಿ, ಮುಂತಾದ ಸ್ಥಳಗಳಿಂದ ಕಾರ್ಯಚರಣೆ ಮಾಡಲಾಗುತ್ತದೆ. ಸಾರ್ವಜನಿಕ ಪ್ರಯಾಣಿಕರು ಈ ವಿಶೇಷ ಬಸ್‌ಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವೈವಿಧ್ಯತೆಯಲ್ಲಿ ಏಕತೆ ಮೂಡಿಸುವ ರಾಷ್ಟ್ರೀಯ ಏಕಾತ್ಮಕ ಯಾತ್ರೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.7–ಒಂದು ರಾಷ್ಟ್ರ ಒಂದು ಸಂಸ್ಕೃತಿ, ಒಂದೇ ಜನ ಎಂಬ ಆಶಯದೊಂದಿಗೆ ವೈವಿಧ್ಯತೆಯಲ್ಲಿ ಏಕತೆಯನ್ನು ಮೂಡಿಸುವ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಏಕಾತ್ಮಕ ಯಾತ್ರೆಯ ಕಾರ್ಯ ಶ್ಲಾಘನೀಯವಾಗಿದೆ ಎಂದು ಧಾರವಾಡ ಐಐಐಟಿಯ ನಿರ್ದೇಶಕ ಮಹಾದೇವ ಪ್ರಸನ್ನ ಹೇಳಿದರು. ವಿದ್ಯಾಗಿರಿ ಬಸವೇಶ್ವರ ಇಂಜನೀಯರಿಂಗ್ ಕಾಲೇಜಿನ ಸಭಾಭವನದಲ್ಲಿ ನಡೆದ ಎಬಿವಿಪಿಯ ಸ್ಟೂಡೆ–ಂಟ್ ಎಕ್ಸ್‌ಪೀರಿಯನ್ಸ್ ಇನ್ ಇಂಟರ್ ಸ್ಟೇಟ್ ಲಿವಿಂಗ್‌ನ 2025ರ ರಾಷ್ಟ್ರೀಯ ಏಕಾತ್ಮಕ ಯಾತ್ರೆಯ ಅಭಿನಂಧನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಎಬಿವಿಪಿ ರಾಷ್ಟ್ರೀಯ ಏಕಾತ್ಮಕ ಯಾತ್ರೆಗಳ ಮೂಲಕ ನಾವೆಲ್ಲರೂ ಒಂದು, ನಮ್ಮೆಲ್ಲರ ಸಂಸ್ಕೃತಿ ಒಂದೇ ಎಂಬ ಭಾವನೆಯೊಂದಿಗೆ ಎಲ್ಲರನ್ನೂ ಒಗ್ಗೂಡಿಸುವ ಕಾರ್ಯ ಮಾಡುತ್ತಿರುವುದು ಮೆಚ್ಚುವಂತದ್ದು ಎಂದರು. ಮೇಘಾಲಯ ಹಾಗೂ ನಾಗಾಲ್ಯಾಂಡಿನ ಉಸ್ತುವಾರಿ ಮತ್ತು ಮಿಜೋರಾಮನ ರಾಜ್ಯ ಸಂಘಟನಾ ಕಾರ್ಯದರ್ಶಿ ಮಂಜುನಾಥ ಮಂಗಲಗಿ ಮಾತನಾಡಿ, ಈ ಸೀಲ್ ಯಾತ್ರೆ ಈಶಾನ್ಯ ರಾಜ್ಯಗಳಿಗೆ ಹೊಸ ಹುಮ್ಮಸ್ಸನ್ನು ಕೊಟ್ಟಿದೆ ಎಂದರು.

ಅತಿಥಗಳಾಗಿ ಆಗಮಿಸಿದ್ದ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಮಾತನಾಡಿ, ಈಶಾನ್ಯ ರಾಜ್ಯಗಳನ್ನು ಮುಖ್ಯವಾಹಿನಿಗೆ ತರುವ ಪ್ರಯುತ್ನವನ್ನು ಈ ರಾಷ್ಟ್ರೀಯ ಏಕಾತ್ಮಕ ಯಾತ್ರೆ ಮಾಡುತ್ತಿದೆ, ಪ್ರಧಾನಿ ಮೋದಿ ಬಂದ ನಂತರದಲ್ಲಿ ಈಶಾನ್ಯ ರಾಜ್ಯಗಳಿಗೆ ಪ್ರತ್ಯೇಕ ಮಂತ್ರಾಲಯವನ್ನು ಸ್ಥಾಪಿಸಿದ್ದು ಅವರ ಶ್ರೇಯೋಭಿವೃದ್ಧಿಗೆ ಅನೇಕ ಯೋಜನೆಗಳನ್ನು ರೂಪಿಸಿದ್ದಾರೆ ಎಂದರು.

ಬಿವಿವಿ ಸಂಘದಿಂದ ಈಶಾನ್ಯ ರಾಜ್ಯಗಳ 50 ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಕಾರ್ಯವನ್ನು ಹಿಂದೆ ಮಾಡಿದ್ದೆವು. ಅವರಿಗೆ ಇಲ್ಲಿನ ವಾತಾವಾರಣ ಅನಾನುಕೂಲವಾದ ಕಾರಣ ಅವರು ಮರಳಿ ತಮ್ಮ ರಾಜ್ಯಕ್ಕೆ ತೆರಳಿದರು ಎಂಬುದನ್ನು ನೆನಪಿಸಿಕೊಂಡ ಚರಂತಿಮಠ, ದೇಶದ ಎಲ್ಲ ರಾಜ್ಯಗಳು ಸರ್ವತೋಮುಖ ಅಭಿವೃದ್ಧಿ ಹೊಂದಿ ಸಮೃದ್ಧ ಭಾರತ ನಿರ್ಮಾಣವಾಗಲಿ ಎಂದರು.

ರಾಷ್ಟ್ರೀಯ ಏಕಾತ್ಮಕ ಯಾತ್ರೆಯಲ್ಲಿ ಬಾಗಲಕೋಟೆಗೆ ಆಗಮಿಸಿದ 7 ರಾಜ್ಯದ 28 ಜನ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಅಭಿನಂದಿಸಲಾಯಿತು.

ವಿಧಾನ ಪರಿಷತ್ತ ಸದಸ್ಯ ಹನಮಂತ ನಿರಾಣಿ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಡಾ.ಅನಂದ ಹೊಸೂರ, ಸಚಿನ ಕುಳಗೇರಿ, ಅಕ್ಷಯ ರಾಜುರಕರ, ಸ್ವಾಗತ ಸಮಿತಿಯ ಅಧ್ಯಕ್ಷ ಸಿ.ಎಸ್.ಪಾಟೀಲ, ಪ್ರತಿನಿಧಿಗಳಾದ ದಿಸ್ಕೆಮ್ಲಂಗ ಲಂಡಬಂಗ್ (ಮೇಘಾಲಯ), ರೆಕಂಗಪುಯಿ (ಮಿಜೋರಂ) ವೇದಿಕೆ ಮೇಲೆ ಇದ್ದರು. ಪ್ರಥ್ವಿಕುಮಾರ, ಚಂದ್ರಶೇಖರ ದೊಡಮನಿ, ನಗರಸಭೆ ಉಪಾಧ್ಯಕ್ಷೆ ಶೋಭಾ ರಾವ, ವಿ.ಪಿ.ಗಿರಿಸಾಗರ, ಭಾಸ್ಕರ ಮನಗೂಳಿ ಸೇರಿದಂತೆ ಅನೇಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸ್ವಾಗತ ಮತ್ತು ಪರಿಚಯವನ್ನು ಡಾ.ಬಸವರಾಜ ಕುಂಬಾರ ಮಾಡಿದರು, ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ನೃತ್ಯ ಪ್ರದರ್ಶನಗಳು ನೆರೆದ ಜನರ ಮನ ತಣಿಸಿದವು.

## ಫೆ. 10ರಂದು ಕಾಯಕ ಶರಣರ ಜಯಂತಿ ಆಚರಣೆ

ಕಲಬುರಗಿ,ಫೆ.07:ಕಲಬುರಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವುಗಳ ಸಂಯುಕ್ತಾಶ್ರಯದಲ್ಲಿ ಕಾಯಕ ಶರಣರಾದ ಮಾದಾರ ಚನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಹಾಗೂ ಉರಿಲಿಂಗಪೆದ್ದಿರವರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಫೆಬ್ರವರಿ10ರಂದು ಸೋಮವಾರ ಬೆಳಿಗ್ಗೆ 11.30 ಗಂಟೆಗೆ ಕಲಬುರಗಿ ನಗರದ ಡಾ.ಎಸ್.ಎಂ.ಪಂಡಿತ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್, ಅಫಜಲಪುರ ಶಾಸಕ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷರಾದ ಎಂ.ವೈ. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಆಳಂದ ಶಾಸಕ ಹಾಗೂ ಮುಖ್ಯಮಂತ್ರಿಯವರ ಸಲಹೆಗಾರ (ನೀತಿ ಮತ್ತು ಕಾರ್ಯಕ್ರಮ) ರಾದ ಬಿ.ಆರ್. ಪಾಟೀಲ ಹಾಗೂ ಕರ್ನಾಟಕ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್ ಅವರು ಗೌರವ ಉಪಸ್ಥಿತಿ ವಹಿಸುವರು. ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ, ಬೀದರ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರುಗಳಾದ ಬಸವರಾಜ ಮತ್ತಿಮಡು, ಡಾ. ಅವಿನಾಶ ಉಮೇಶ ಜಾಧವ, ವಿಧಾನ ಪರಿಷತ್ ಶಾಸಕರುಗಳಾದ ಸುನೀಲ್ ವಲ್ಲ್ಯಾಪುರೆ, ಶಶೀಲ ಜಿ. ನಮೋಶಿ, ಡಾ. ಬಿ.ಜಿ.ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ಡಾ. ಸಾಬಣ್ಣ ತಳವಾರ, ತಿಮ್ಮಣ್ಣಪ್ಪ ಕಮಕನೂರ, ಜಗದೇವ ಗುತೆ–ೇದಾರ್, ಮಹಾನಗರಪಾಲಿಕೆ ಮಹಾಪೌರ ಯಲ್ಲಪ್ಪ ನಾಯ್ಕೋಡಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಬ್ದುಲ್ ರಶೀದ ಅವರು ಅತಿಥಿಗಳಾಗಿ ಪಾಲ್ಗೊಳ್ಳುವರು.

ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತ ಕೃಷ್ಣ ಭಾಜಪೇಯಿ, ಕಲಬುರಗಿ ಈಶಾನ್ಯ ವಲಯದ ಪೊಲೀಸ್ ಉಪಮಹಾನಿರೀಕ್ಷಕ ಅಜಯ ಹಿಲೋರಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ಎಂ. ಸುಂದರೇಶ ಬಾಬು, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಡಾ. ಆಕಾಶ ಎಸ್, ಕೋಡ್ಲಾ ಉರಿಲಿಂಗಪೆದ್ದಿ ಮಠದ ಉಪಾಧ್ಯಕ್ಷ ಶಂಕರ ಕೋಡ್ಲಾ, ಕಲಬುರಗಿ ಶರಣ ಡೋಹರ ಕಕ್ಕಯ್ಯಾ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಸಾಯಬಣ್ಣ ಹೋಳ್ಕರ್, ಕಲಬುರಗಿ ಅಖಿಲ ಭಾರತ ಬಸವ ಮಾದರ ಚನ್ನಯ್ಯ ಸಮಾಜದ ಅಧ್ಯಕ್ಷ ರುದ್ರಪ್ಪಾ ಎಸ್. ಹೋಳಕುಂದಾ (ರವಿ ವಾಲಿ), ಶರಣ ಮಾದರ ದೂಳಯ್ಯ ಸಮಜದ ಅಧ್ಯಕ್ಷ ರಮೇಶ ಹೊಸಮನಿ ಹಾಗೂ ಜಿಲ್ಲಾ ಸಮಗಾರ ಹರಳಯ್ಯ ಸಮಾಜದ ಅಧ್ಯಕ್ಷ ಕಾಶಿರಾಯ ನಂದೂರಕರ್ ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ ಕಲಬುರಗಿ ಸಾಹಿತಿ ಶಿವರಾಜ ಪಾಟೀಲ ಅವರು ವಿಶೇಷ ಉಪನ್ಯಾಸ ನೀಡುವರು.

# ಆನೆಕಾಲು ರೋಗ ನಿವಾರಣೆಗೆ ಅರ್ಹರಿಗೆ ತಪ್ಪದೆ ಔಷಧಿ ನುಂಗಿಸಿ: ಜಿಲ್ಲಾಧಿಕಾರಿ ಡಾ.ಸುಶೀಲ .ಬಿ.

ಮಲ್ಲಮ ನುಡಿ ವಾರ್ತೆ ಯಾದಗಿರಿ:ಫೆ:7:ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಇದೇ ಫೆಬ್ರವರಿ 10 ರಿಂದ ಫೆಬ್ರವರಿ 28 ರವರೆಗೆ ಆನೆಕಾಲು ರೋಗ ನಿವಾರಣೆಗಾಗಿ ಜಿಲ್ಲೆಯ ವಡಗೇರಾ ಬ್ಲಾಕ್ ನಲ್ಲಿ ಸಾಮೂಹಿಕ ಔಷಧಿ ನುಂಗಿಸುವ (ಕಾರ್ಯಕ್ರಮ) ಹಮ್ಮಿಕೊಂಡಿದ್ದು,ಸಂಬಂಧಪಟ್ಟ ಅಧಿಕಾರಿ ಹಾಗೂ ಸಿಬ್ಬಂದಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿಡಾ.ಸುಶೀಲ.ಬಿ.ಅವರು ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಆನೆಕಾಲು ರೋಗನಿವಾರಣೆಗೆ ವಡಗೇರಾ ಬ್ಲಾಕ್ ನಲ್ಲಿ ಸಾಮೂಹಿಕ ಔಷಧಿ ನುಂಗಿಸುವ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆಗಳ ಕುರಿತು ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಆನೆಕಾಲು ರೋಗ ಸೋಂಕಿತ ಕ್ಯೂಲೆಕ್ಸ ಸೊಳ್ಳೆಗಳು ಕಚ್ಚುವುದರಿಂದ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತದೆ.ಒಮ್ಮೆ ಈ ರೋಗ ಬಂದಲ್ಲಿ ಗುಣಮುಖ ಕಷ್ಟಸಾಧ್ಯ,ಕಾರಣ ವರ್ಷಕ್ಕೊಮ್ಮೆ ಉಚಿತವಾಗಿ ಐವರ್ ಮೆಕ್ಟಿನ್, ಡಿ.ಇ.ಸಿ,ಆಲ್ಬೆಂಡಜೋಲ್,ತ್ರಿವಳಿ ಗುಳಿಗೆಗಳನ್ನು ಅರ್ಹರಿಗೆ ತಪ್ಪದೇ ನುಂಗಿಸಬೇಕು. ಇದರಿಂದ ಯಾವುದೇ ರೀತಿಯ ಅಡ್ಡ ಪರಿಣಾಮ ಇಲ್ಲದೇ ಇರುವದರಿಂದ ಈ ಕುರಿತು ಅರಿವು ಮೂಡಿಸುವ ಜೊತೆಗೆ ಅರ್ಹರು ನುಂಗಿದ ಬಗ್ಗೆ ಖಾತ್ರಿಪಡಿಸಿಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಅತೀಅಪಾಯವುಳ್ಳ ಗ್ರಾಮಗಳಲ್ಲಿ ಯೋಜನಾಬದ್ಧವಾಗಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು.ಅಂಕಿ ಅಂಶಗಳ ಮೇಲೆ ಅಷ್ಟೇ



ಅಲ್ಲದೇ ಕ್ಷೇತ್ರ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ಹಿಸಬೇಕು.ಅರ್ಹರು ಗುಳಿಗೆ ನುಂಗಲು ನಿರಾಕರಿಸದಂತೆ ಎಚ್ಚರಿಕೆ ವಹಿಸಬೇಕು.ಒಮ್ಮೆ ಆನೆಕಾಲು ರೋಗ ಬಂದಲ್ಲಿ ನಿವಾರಣೆ ಕಷ್ಟ ಸಾಧ್ಯ, ಜೊತೆಗೆ ಅಂಗವಿಕಲತೆಗೂ ಕಾರಣವಾಗುವದರಿಂದ ನಿರಂತರ ಮನವರಿಕೆ ಮಾಡಿಸಿ ಅರ್ಹರು ಈ ಗುಳಿಗೆಗಳನ್ನು ಪಡೆಯುವಂತೆ ನೋಡಿಕೊಳ್ಳಲು ಸೂಚಿಸಿದರು.

ಆರೋಗ್ಯ ಇಲಾಖೆ ಅಧಿಕಾರಿಗಳು,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು,ತಾ.ಪಂ ಹಾಗೂ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು,ಆಯಾ ಶಾಲೆಗಳ ಮುಖ್ಯೋಪಾಧ್ಯಾಯರು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಿ ಗುರಿಗೆ ತಕ್ಕಂತೆ ಗುಳಿಗೆ ನುಂಗಿಸುವ ಕಾರ್ಯದಲ್ಲಿ ಪ್ರಗತಿ ಸಾಧಿಸಬೇಕು. ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಚ್ಛತೆ,ಶೌಚಾಲಯ ಶುಚಿತ್ವ,ಸೊಳ್ಳೆಗಳ ನಿಯಂತ್ರಣ ಕ್ರಮ ಕೈಗೊಳ್ಳಬೇಕು.ಯಾವುದೇ ಗ್ರಾಮ ಬಿಟ್ಟುಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದು ಸೂಚನೆ ನೀಡಿದರು.

ಸಾಂಕ್ರಾಮಿಕ ರೋಗ ನಿಯಂತ್ರಣ ಕಾರ್ಯಕ್ರಮಾಧಿಕಾರಿ ಡಾ. ಎಮ್.ಎ. ಸಾಜೀದ್ ಅವರು ಮಾತನಾಡಿ,ಐವರ್ ಮೆಕ್ಟಿನ್, ಡಿ.ಇ.ಸಿ ಹಾಗೂ ಆಲ್ಬೆಂಡಜೋಲ್ ತ್ರಿವಳಿ ಗುಳಿಗೆ ಸಂಪೂರ್ಣ ಸುರಕ್ಷಿತ ಹಾಗೂ ಪರಿಣಾಮಕಾರಿಯಾಗಿವೆ. ಆನೆಕಾಲು ರೋಗ ಲಕ್ಷಣಗಳಾದ ಕೈಕಾಲುಗಳಲ್ಲಿ ಊತ,ಸ್ತನ ವೃಷಣಗಳು ದಪ್ಪವಾಗುವುದು, ಕ್ರಮೇಣ ದೈಹಿಕ ಅಂಗವಿಕಲತೆ ಉಂಟಾಗಬಹುದಾಗಿದ್ದು,ವಡಗೇರಾ ಬ್ಲಾಕ್ ನ 6 ಪಿ.ಹೆಚ್.ಸಿ ಬೆಂಡೆಬೆಂಬಳಿ,ಚಟ್ನಳ್ಳಿ,ಹಯ್ಯಾಳ.ಬಿ, ಕುರಕುಂದಾ ಶಿರವಾಳ,ತಡಬಿಡಿಗಳ ವ್ಯಾಪ್ತಿಯಲ್ಲಿ ಗುಳಿಗೆ ನುಂಗಿಸುವ ಕಾರ್ಯಕ್ರಮ ಫೆಬ್ರವರಿ 10 ರಿಂದ 28ರವರೆಗೆ ನಡೆಯಲಿದೆ.

ಪ್ರತಿ ದಿನ 25 ಮನೆಗಳಿಗೆ ಭೇಟಿ ನೀಡಿ ಔಷಧಿ ನೀಡಲಾಗುತ್ತದೆ.ಶಾಲೆಗಳು, ಗ್ರಾಮ ಪಂ ವ್ಯಾಪ್ತಿಯ ಮನೆ ಮನೆಗೆ ಆಶಾ, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ನಿಯೋಜಿತ ಸಿಬ್ಬಂದಿಗಳು ಭೇಟಿ ನೀಡುವರು.

1ರಿಂದ 2 ವರ್ಷ ವಯೋಮಾನದವರಿಗೆ ಈ ಮಾತ್ರೆ ನೀಡಲಾಗಲ್ಲ.2 ರಿಂದ 5 ವರ್ಷ ದೊಳಗಿನ ಮಕ್ಕಳಿಗೆ ಡಿ.ಇ.ಸಿ 100 ಮಿ.ಗ್ರಾಂ –1 ಗುಳಿಗೆ,400ಮಿ.ಗ್ರಾಂ ನ ಚಪ್ಪರಿಸುವ– 1 ಗುಳಿಗೆ ನೀಡಲಾಗುತ್ತದೆ.

6 ರಿಂದ 14 ವರ್ಷ ವಯೋಮಾನದವರಿಗೆ ,2 – ಡಿ.ಇ.ಸಿ ಹಾಗೂ 1– ಆಲ್ಬ್ಂಡಜಾಲ್ 1 ಗುಳಿಗೆ ಹಾಗೂ 15 ವರ್ಷ ಮೇಲ್ಪಟ್ಟವರಿಗೆ ಡಿಇಸಿ–3 ಗುಳಿಗೆ ಹಾಗೂ 1 –ಆಲ್ಬ್ಂಡಜಾಲ್ ಗುಳಿಗೆ ನೀಡಲಾಗುತ್ತದೆ.ಅದರಂತೆ ಎತ್ತರಕ್ಕೆ ಅನುಗುಣವಾಗಿ ಐವರಮೆಕ್ಟಿನ್ ಮಾತ್ರೆ ನೀಡಲಾಗುತ್ತದೆ.

ಐವರಮೆಕ್ಟಿನ್ ಮಾತ್ರೆ 5 ವರ್ಷ ದೊಳಗಿನ ಮಕ್ಕಳಿಗೆ ನೀಡಬಾರದು.ಹಾಗೂ 3 ವಿಧವಾದ ಮಾತ್ರೆಗಳನ್ನು ಗರ್ಭಿಣಿಯರಿಗೆ,ಹೃದಯ, ಶ್ವಾಸಕೋಶ , ಮೂತ್ರಪಿಂಡ ಸಂಬಂಧಿ ದೀರ್ಘಾವಧಿ ಖಾಯಿಲೆಯಿಂದ ನರಳುತ್ತಿರುವವರಿಗೆ ಈ ಗುಳಿಗೆಗಳನ್ನು ನೀಡಬಾರದು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ,ಡಿವೈಎಸ್ ಪಿ ಅರುಣಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಮಹೇಶ್ ಬಿರಾದಾರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆಗೊಳಿಸಿದರು.

# ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರ ಪ್ರವಾಸ

ಕಲಬುರಗಿ,ಫೆ.07:ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರಾದ ವಿನಯ ಕುಲಕರ್ಣಿ ಅವರು ಫೆಬ್ರವರಿ 13 ರಂದು ಗುರುವಾರ ರಾತ್ರಿ 10 ಗಂಟೆಗೆ ರಾಯಚೂರಿನಿಂದ ಕಲಬುರಗಿಗೆ ಆಗಮಿಸಿ ವಾಸ್ತವ್ಯ ಮಾಡುವರು.

ಫೆಬ್ರವರಿ 14 ರಂದು ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಕಲಬುರಗಿ ಕಾರ್ಯಪಾಲಕ ಅಭಿಯಂತರವರ ಕಚೇರಿಯಲ್ಲಿ ಮಂಡಳಿಯ ಕಲಬುರಗಿ ವಿಭಾಗದ ಯೋಜನೆ/ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸುವರು. ನಂತರ ವಿವಿಧ ಕಾಮಗಾರಿಗಳ ಕ್ಷೇತ್ರ ವೀಕ್ಷಣೆ ಮಾಡುವರು. ನಂತರ ಕಲಬುರಗಿಯಿಂದ ಹೈದ್ರಾಬಾದ್‌ಗೆ ಪ್ರಯಾಣಿಸುವರು.

# ತುಲಿಪ್ ಇಂಟರ್ಶಿಪ್ ಅಭ್ಯರ್ಥಿಗಳಿಗೆ ಲಲಿತಾ ಅನಪೂರರಿಂದ ಪ್ರಮಾಣ ಪತ್ರ ವಿತರಣೆ



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:ಫೆ,07:ಯಾದಗಿರಿ ನಗರ ಸಭೆಯ ದೀನ್ ದಯಾಳ್ ಅಂತ್ಯೋದಯ ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ 2023–24 ನೇ ಸಾಲಿನ ಡೇ –ನಲ್ಮ್ ಯೋಜನೆ (ತುಲಿಪ್) (ಖಿಗ–ಐಖಕ) ಕಾರ್ಯಕ್ರಮದಲ್ಲಿ ದಿ ಹರ್ಬನ್ ಲರ್ನಿಂಗ್ ಇಂಟರ್ನಶಿಫ್ ಪ್ರೋಗ್ರಾಂ ಅಡಿಯಲ್ಲಿ ವಿಷಯವಾರು ಅಧ್ಯಾಯನ ಮಾಡಿ ವರದಿ ಸಲ್ಲಿಸಿದ ಅಭ್ಯರ್ಥಿಗಳಿಗೆ ನಗರಸಭೆ ಅಧ್ಯಕ್ಷೆ ಕು.ಲಲಿತಾ ಅನಪೂರ ಅವರು ಪ್ರಮಾಣ ಪತ್ರ ವಿತರಿಸಿದರು.

ನಗರ ಪ್ರದೇಶದಲ್ಲಿ ಆಶ್ರಯ ತಾಣವಾಗಿರುವ ನಿರಾಶ್ರಿತರ ಕೇಂದ್ರಗಳು ಯಾದಗಿರಿ ನಗರದ ಒಂದು ವಿಶ್ಲೇಷಣೆ ವಿಷಯಕ್ಕೆ ಬೀರಲಿಂಗಪ್ಪ ಕಿಲ್ಲನಕೇರಾ, ನಗರದ ಪ್ರದೇಶಗಳಲ್ಲಿ ತೃತೀಯ ಲಿಂಗಿಗಳು ಮತ್ತು ಸ್ವಸಹಾಯ ಸಂಘಗಳು ವಿಷಯಕ್ಕೆ ಶಿವರೆಡ್ಡಿ, ಯಾದಗಿರಿ ನಗರದ ಬೀದಿ ಬದಿ ವ್ಯಾಪಾರಿಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಬದಲಾವಣೆಯಲ್ಲಿ ಪ್ರಧಾನಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮನಿರ್ಭರ್ ನಿಧಿಯ ಪಾತ್ರ ವಿಷಯಕ್ಕೆ ಪುಷ್ಪಾ ಬೀರಪ್ಪ, ಮಹಿಳಾ ಸಬಲೀಕರಣದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರ ವಿಷಯಕ್ಕೆ ಅಂಬಿಕಾ ಎಂಬುವವರು ವರದಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷೆ ರುಖೀಯಾ ಬೇಗಂ, ಪೌರಾಯುಕ್ತ ಉಮೇಶ ಚವ್ಹಾಣ, ಸಮುದಾಯ ಸಂಘಟನಾಧಿಕಾರಿ ಭೀಮಣ್ಣ ಕೆ ವೈದ್ಯ ಹಾಗೂ ಸಿಆರ್ಪಿರವರು ಉಪಸ್ಥಿತರಿದ್ದರು.

# ಕುಷ್ಠರೋಗ ಸಂಪೂರ್ಣವಾಗಿ

## ಗುಣಪಡಿಸಬಹುದಾದ ರೋಗ ಯಾವುದೇ ಭಯ ಬೇಡ



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ : ಫೆ. 07 : ಕುಷ್ಠರೋಗದಿಂದ ಯಾರೂ ಬಾಧಿತರಾಗದಂತೆ ನೋಡಿಕೊಳ್ಳೋಣ" ಈ ಒಂದು ಕುಷ್ಠರೋಗವು ಹಿಂದಿನ ಕಾಲದಿಂದಲೂ ಬಂದಿರತಕ್ಕಂತ ರೋಗ, ಈ ರೋಗವು ಹೇಗೆ ಹರಡುತ್ತದೆ ರೋಗಕ್ಕೆ ಸಂಪೂರ್ಣವಾದ ಚಿಕಿತ್ಸೆಯು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಚಿಕಿತ್ಸೆ ದೊರೆಯುತ್ತದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಷ್ಠರೋಗ ವಿಭಾಗ ಡಾ.ಪದ್ಮಾನಂದ ಎ.ಗಾಯಕವಾಡ ಅವರು ಹೇಳಿದರು. ಯಾದಗಿರಿ ಗಂಗಾ ನಗರದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಈ ಒಂದು ಶಾಲೆಯಲ್ಲಿ ಸ್ಪರ್ಶ ಕುಷ್ಠರೋಗ ಅರಿವು ಆಂದೋಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

"ಒಟ್ಟಾಗಿ, ನಾವು ಕುಷ್ಠರೋಗದ ಬಗ್ಗೆ ಜಾಗೃತಿ ಮೂಡಿಸೋಣ, ತಪ್ಪು ಕಲ್ಪನೆಗಳನ್ನು ಹೋಗಲಾಡಿಸೋಣ ಮತ್ತು ಕುಷ್ಠರೋಗದಿಂದ ಯಾರೂ ಬಾಧಿತರಾಗದಂತೆ ನೋಡಿಕೊಳ್ಳೋಣ" ಈ ಒಂದು ಕುಷ್ಠರೋಗವು ಹಿಂದಿನ ಕಾಲದಿಂದಲೂ ಬಂದಿರತಕ್ಕಂತ ರೋಗ, ಈ ರೋಗವು ಹೇಗೆ ಹರಡುತ್ತದೆ? ಈ ರೋಗದ ಲಕ್ಷಣಗಳು ಯಾವ ರೀತಿ ಇರುತ್ತವೆ ಮತ್ತು ಈ ರೋಗಕ್ಕೆ ಸಂಪೂರ್ಣವಾದ ಚಿಕಿತ್ಸೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಚಿಕಿತ್ಸೆ ದೊರೆ–ಯುತ್ತದೆ ಎಂದರು.

ಜನವರಿ 30 ರಿಂದ ಫೆಬ್ರವರಿ 13ರ ವರೆಗೆ ಜಾಗೃತಿ ಅಭಿಯಾನವು ಇರುತ್ತದೆ. ಹಾಗಾಗಿ ಜಾಗೃತಿ ಅಭಿಯಾನವು ಅರಿವು ಮೂಡಿಸುವುದು. ಎಲ್ಲರ ಜವಾಬ್ದಾರಿ. ಸಂಪೂರ್ಣವಾದ ಮಾಹಿತಿಯನ್ನು ಕುಷ್ಠರೋಗದ ಬಗ್ಗೆ ಮಾಹಿತಿ ನೀಡಿದರು.

ರೋಗವು ಸಂಪೂರ್ಣವಾಗಿ ಗುಣಪಡಿಸಬಹುದಾದ ರೋಗ ಯಾವುದೇ ಭಯ ಬೇಡ ಮಹತ್ಮಾ ಗಾಂಧೀಜಿಯವರ ಕಂಡ ಕನಸಾದ ಕುಷ್ಠರೋಗ ಮುಕ್ತ ಭಾರತವನ್ನಾಗಿ ಎಲ್ಲರ ಜವಾಬ್ದಾರಿ ಮಹತ್ಮಾ ಗಾಂಧೀಜಿಯವರ ಕಂಡ ಕನಸು ನನಸಾಗಿಸೋಣ. ಎಂಬುವುದರ ಮುಖಾಂತರ ಪ್ರತಿಜ್ಞೆಯನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪಿ.ಎಮ್. ಡ್ಲೂ ?? ಅವರ ಬಸ್ಸಯ್ಯ ಗುತ್ತೇದಾರ, ಶಾಲೆಯ ಮುಖ್ಯ ಗುರುಗಳಾದ ಫೈಯಾಜ್ ಅಹ್ಮದ್, ಸಹ ಶಿಕ್ಷಕರಾದ ಮಲ್ಲನಗೌಡ, ಬಸವರಾಜ ಸಜ್ಜನ್, ಹೇಮಾವತಿ ಗುಂಡಳ್ಳಿ, ಆರೋಗ್ಯ ಸುರಕ್ಷಣಾಧಿಕಾರಿಯಾದ ಸುನೀತಾ.ಕೆ, ಆಶಾ ಕಾರ್ಯಕರ್ತೆಯರು ಸಂಗಮ್ಮ ಉಪಸ್ಥಿತರಿದ್ದರು.

# ಕುರಆನ್ ಪ್ರವಚನ ಕಾರ್ಯಾಲಯ ಉದ್ಘಾಟನೆ




ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:ಫೆ.7: ಪಟ್ಟಣದ ಶ್ರೀ ಶರಣ ಮುತ್ಯಾ ದೇವಸ್ಥಾನ ಆವರಣದಲ್ಲಿ ಫೇ. 21ರಿಂದ 23ರ ವರೆಗೆ ನಡೆಯಲಿರುವ ಕನ್ನಡದಲ್ಲಿ ಸಾರ್ವಜನಿಕ ಕುರಆನ್ ಪ್ರವಚನ ಕಾರ್ಯಕ್ರಮದ ಕಾರ್ಯಾಲಯವನ್ನು ಶುಕ್ರವಾರ ಶ್ರೀ ಶರಣ ಮುತ್ಯಾ ದೇವಸ್ಥಾನದ ಎದುರುಗಡೆ ಇರುವ ವಿರೇಶ ಬಾಗೇವಾಡಿ ಬಿಲ್ಡಿಂಗ್ ನಲ್ಲಿ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಜಮಾಅತೆ ಇಸ್ಲಾಮಿ ಹಿಂದ್ ರಾಜ್ಯ ಘಟಕದ ಉಪಾಧ್ಯಕ್ಷ ಜನಾಬ. ಮಹಮ್ಮದ್ ಯೂಸೂಫ ಕಣ್ಣಿ ಮಾತನಾಡಿ ಪಟ್ಟಣದಲ್ಲಿ ಈ ಮೊದಲು ನಡೆದ ಎರಡೂ ಪ್ರವಚನಗಳು ಎಲ್ಲ ಸಮಾಜದ ಬಂಧುಗಳ ಸಹಕಾರದಿಂದ ಅಭೂತಪೂರ್ವ ಯಶಸ್ವಿಯಾಗಿವೆ ಈಗ ಮೂರನೇ ಬಾರಿ ಈ ಪ್ರವಚನವನ್ನು ಹಮ್ಮಿಕೊಳ್ಳಲಾಗಿದೆ, ಇದರ ಕಾರ್ಯಗಳನ್ನು ಮಾಡಲಿಕ್ಕಾಗಿ ಇವತ್ತು ಈ ಕಾರ್ಯಾಲಯವನ್ನು ಆರಂಭಿಸಲಾಗಿದೆ ಇದಕ್ಕೆ ಅವಕಾಶ ಮಾಡಿಕೊಟ್ಟ ಈ ಕಟ್ಟಡದ ಮಾಲೀಕರಾದ ವೀರೇಶ್ ಬಾಗೇವಾಡಿ ಅವರಿಗೆ ಸಂಘಟನೆ ವತಿಯಿಂದ ಅಭಿನಂದಿಸುತ್ತೇನೆ ಎಂದರು. ಸಮಾರಂಭದ ಸಾನಿಧ್ಯ ವಹಿಸಿ ಶ್ರೀ ಖಾಸ್ಗತೇಶ್ವರ ಮಠದ ಮುಖ್ಯಸ್ಥರಾದ ವೇದ ಮೂರ್ತಿ ಶ್ರೀ ಮುರುಗೇಶ ವಿರಕ್ತಮಠ ಅವರು ಮಾತನಾಡಿ ಪಟ್ಟಣದಲ್ಲಿ ಈ ಮೊದಲು ನಡೆದ ಎರಡೂ ಪ್ರವಚನಗಳಲ್ಲಿ ಎಲ್ಲ ಸಮಾಜದವರ ಸಹಕಾರದಿಂದ ಯಶಸ್ವಿಯಾಗಿವೆ, ಪಟ್ಟಣದ ಶಾಂತಿ ಹಾಗೂ ಸೌಹಾರ್ದತೆಗೆ ಜಮಾತ್ ಬಂಧುಗಳ ಕೊಡುಗೆ ಬಹಳಷ್ಟು ಇದ್ದು ಅವರ ಕಾರ್ಯ ಶ್ಲಾಘನೀಯವಾಗಿದೆ ಈ ಪ್ರವಚನವು ಯಶಸ್ವಿಯಾಗಲು ಎಲ್ಲರ ಸಹಕಾರದೊಂದಿಗೆ ಶ್ರೀ ಮಠದ ಸಂಪೂರ್ಣ ಸಹಕಾರವು ಇರುವುದು ಎಂದರು. ಹಿರಿಯ ಪತ್ರಕರ್ತ ಜಿ.ಟಿ.ಘೋರ್ಪಡೆ,ಪ್ರವಚನಕಾರ ಲಾಲಹುಸೇನ ಕಂದಗಲ್, ಕಸಾಪ ಅಧ್ಯಕ್ಷ ಆರ್.ಎಲ್. ಕೊಪ್ಪದ, ವಿಕಾಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವಿರೇಶ ಬಾಗೇವಾಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ,ಅಧ್ಯಕ್ಷ ಮುಜಾಹೀದ ನಮಾಜಕಟ್ಟಿ, ಪ್ರವಚನ ಸಂಚಾಲಕ ಸೈಯದ್ ಇರ್ಫಾನ್ ಖಾಜಿ,ಅಲ್ಲಾಭಕ್ಷ ನಮಾಜಕಟ್ಟಿ,ಎಂ.ಎ.ಮೇತ್ರಿ, ಮಹಮ್ಮದ್ ಕಾಸೀಮ ನಮಾಜಕಟ್ಟಿ,ಹುಸೇನ್ ಪಟೇಲ, ಇಸ್ಮಾಯಿಲ್ ಸಾಸಬಾಳ,ಶಫೀಕ್ ಇನಾಮದಾರ, ಅಜೀಜ ಜಮಾದಾರ, ಇಸ್ಮಾಯಿಲ್ ನಮಾಜಕಟ್ಟಿ, ಮಜೀದ ಲಾಹೋರಿ, ಮೆಹಬೂಬ ನಮಾಜಕಟ್ಟಿ ಮತ್ತಿತರರು ಇದ್ದರು.

# ಬೆಂಬಲ ಬೆಲೆ ಯೋಜನೆಯಡಿ ತೊಗರಿಕಾಳು ಖರೀದಿ ಕೇಂದ್ರ ಆರಂಭ

ಮಲ್ಲಮ್ಮನುಡಿವಾರ್ತೆಯಾದಗಿರಿ : ಫೆ 07 : ಬೆಂಬಲ ಬೆಲೆ ಯೋಜನೆಯಡಿ ತೊಗರಿಕಾಳು ಖರೀದಿ ಕೇಂದ್ರಗಳು ಆರಂಭ ಖರೀದಿಸಲು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತ, ಶಾಖೆ ಶಹಾಪೂರ ಏಜೇನ್ಸಿಯನ್ನಾಗಿ ನೇಮಿಸಿದೆ ಎಂದು ಯಾದಗಿರಿ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ ಅವರು ತಿಳಿಸಿದ್ದಾರೆ. ನಗರದ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಇತ್ತೀಚಿನ ನಡೆದ 2024–25ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ತೊಗರಿಕಾಳು ಖರೀದಿ ಕೇಂದ್ರ ಆರಂಭವನ್ನು ಯಾದಗಿರಿ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತ, ಶಾಖೆ ಶಹಾಪೂರ ಏಜೇನ್ಸಿಯನ್ನಾಗಿ ನೇಮಿಸಿದೆ. ಯಾದಗಿರಿ ಜಿಲ್ಲೆಯಲ್ಲಿ 21 ಖರೀದಿ ಕೇಂದ್ರಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ರೈತ ಉತ್ಪಾದಕ ಸಂಘಗಳನ್ನು ಗುರುತಿಸಿದ್ದು, ತಕ್ಷಣದಿಂದ ಜಾರಿಗೆ ಬರುವಂತೆ ತೆರಯಲಾಗಿದೆ.ರೈತರನೊಂದಣಿ ಕಾರ್ಯವನ್ನು 75 ದಿನಗಳು 2025ರ ಮಾರ್ಚ್ 20ರ ವರೆಗೆ ಹಾಗೂ ಖರೀದಿಯನ್ನು 90 ದಿನಗಳ ವರೆಗೆ 2025ರ ಎಪ್ರಿಲ್ 4ರ ವರೆಗೆ ನೊಂದಣಿ ಜೊತೆ ಜೊತೆಗೆ ಖರೀದಿಯನ್ನು TAPCMS,FPO,PACS ಕೇಂದ್ರಗಳಲ್ಲಿ ತೊಗರಿಕಾಳು ಖರೀದಿ ಕೇಂದ್ರ ಆರಂಭಿಸಿದೆ.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತ ಶಹಾಪೂರ ಶಾಖೆ (ಖರೀದಿ ಕೇಂದ್ರಗಳ ಹೆಸರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ), ಖರೀದಿ ಕೇಂದ್ರಗಳ ಯಾದಗಿರಿ ತಾಲ್ಲೂಕಿನ 3 ಖರೀದಿ ಕೇಂದ್ರಗಳು PACS ಹತ್ತಿಕುಣಿ, TAPCMS ಯಾದಗಿರಿ, PACS ರಾಮಸಮುದ್ರ. ಶಹಾಪೂರ ತಾಲ್ಲೂಕಿನಲ್ಲಿ 5 ಖರೀದಿ ಕೇಂದ್ರಗಳ TAPCMS ಶಹಾಪೂರ, PACS ಚಾಮನಾಳ, PACS ಹೊಸಕೇರಾ, ಈಕಔ ಗಂಗನಾಳ, PACS ದೊರನಹಳ್ಳಿ, ಸುರಪುರ ತಾಲ್ಲೂಕಿನಲ್ಲಿ 5 ಖರೀದಿ ಕೇಂದ್ರಗಳು TAPCMS ಸುರಪುರ, ಕಂಅಖ ಕೆಂಭಾವಿ–1, PACS ಕೆಂಭಾವಿ–2, PACS ಮಾಲಗತ್ತಿ, FPO ನಗನೂರ. ಹುಣಸಗಿ ತಾಲ್ಲೂಕಿನ 3 ಖರೀದಿ ಕೇಂದ್ರಗಳು TAPCMS ಹುಣಸಗಿ, ಕಂಅಖ ಕೊಡೇಕಲ್, ಕಂಅಖ ರಾಜನಕೊಳ್ಳುರು. ವಡಗೇರಾ ತಾಲ್ಲೂಕಿನ 2 ಖರೀದಿ ಕೇಂದ್ರಗಳು PACS ಬೆಂಡೆಗಂಬಳಿ, ಕಂಅಖ ಹೈಯಾಳ.ಬಿ. ಗುರುಮಠಕಲ್ ತಾಲ್ಲೂಕಿನ 3 ಖರೀದಿ ಕೇಂದ್ರಗಳು ಕಂಅಖ ಚಪೆಟ್ಲಾ, FPO ಗುರುಮಠಕಲ್, FPO ಸೈದಾಪೂರ. ಶಹಾಪೂರ ತಾಲ್ಲೂಕಿನ 2 ಖರೀದಿ ಕೇಂದ್ರಗಳು PACS ಮದ್ರಿಕಿ, FPO ಗಂಗನಾಳ (ಬುದನೂರ) (krushna teera formers pro-ducer company ltd). ಸುರಪುರ ತಾಲ್ಲೂಕಿನ 2 ಖರೀದಿ ಕೇಂದ್ರಗಳು ಕಂಅಖ ಯಾಳಗಿ, FPO ಸುರಪುರ (ಸದ್ಯೋಜಾತ) ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ರೈತ ಭಾಂದವರು ಇದರ ಸದುಪಯೋಗ ಪಡೆದು–ಕೊಂಡು ತಮ್ಮ ಸಮೀಪದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಅಥವಾ ಉತ್ಪಾದಕ ಸಂಘಗಳಿಗೆ ಭೇಟಿ ನೀಡಿ ತಾವು ಬೆಳೆದ ತೊಗರಿ ಮಾರಾಟಕ್ಕೆ ನೊಂದಾಯಿಸಿಕೊಂಡು ತೆ–ೂಗರಿ ಉತ್ಪನ್ನವನ್ನು ಮಾರಾಟ ಮಾಡಲು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಶಾಹೀನ್ ಕಾಲೇಜಿನಲ್ಲಿ ಅಂಚೆ ಜನ ಸಂಪರ್ಕ ಅಭಿಯಾನ




ಮಲ್ಲಮ್ಮ ನುಡಿ ವಾರ್ತೆ ಬೀದರ. ಫೆ. 07 : ಅಂಚೆ ಇಲಾಖೆ ವತಿಯಿಂದ ಇಲ್ಲಿಯ ಶಹಾಪುರ ಗೇಟ್ ಸಮೀಪದ ಶಾಹೀನ್ ಪದವಿಪೂರ್ವ ವಿಜ್ಞಾನ ಕಾಲೇಜಿನಲ್ಲಿ ಗುರುವಾರ ಜನ ಸಂಪರ್ಕ ಅಭಿಯಾನ ನಡೆಯಿತು.

ಪ್ರಧಾನ ಅಂಚೆ ಅಧೀಕ್ಷಕ ವಿ.ಎಲ್.ಚಿತಕೋಟ ಮಾತನಾಡಿ, ಅಂಚೆ ಸೇವೆಗಳನ್ನು ಗ್ರಾಹಕರ ಮನೆಬಾಗಿಲಿಗೆ ಕೊಂಡೊಯ್ಯಲು ಜನ ಸಂಪರ್ಕ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಾರ್ವಜನಿಕರು ಅಂಚೆ ಇಲಾಖೆಯ ವಿವಿಧ ಸೇವೆಗಳು ಹಾಗೂ ಯೋಜನೆಗಳ ಲಾಭ ಪಡೆಯಬೇಕು ಎಂದು ಹೇಳಿದರು.

ಆಧಾರ್ ತಿದ್ದುಪಡಿಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಶಾಲೆಗಳಲ್ಲಿ ಆಧಾರ್ ಕೌಂಟರ್ ಆರಂಭಿಸಲಾಗುತ್ತಿದೆ ಎಂದು ತಿಳಿಸಿದರು.

ಸಹಾಯಕ ಕೃಷಿ ನಿರ್ದೇಶಕ ಅನ್ಸಾರಿ ಮಾತನಾಡಿ, ಅಂಚೆ ಇಲಾಖೆಯಲ್ಲಿ ಜೀವ ವಿಮೆ, ಅಪಘಾತ ವಿಮೆ ಸೇರಿದಂತೆ ಅನೇಕ ಉತ್ತಮ ಯೋಜನೆಗಳಿವೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಖಾದ್ರಿ ಅವರು ಮಾತನಾಡಿ, ಅಂಚೆ ಇಲಾಖೆ ಶಾಹೀನ್ ಕಾಲೇಜಿನಲ್ಲಿ ಆಧಾರ್ ಕೌಂಟರ್ ಆರಂಭಿಸುವ ಮೂಲಕ ವಿದ್ಯಾರ್ಥಿಗಳ ಸಮಯ ಉಳಿಸಿದೆ. ಈವರೆಗೆ 522 ವಿದ್ಯಾರ್ಥಿಗಳ ಆಧಾರ್ ಕಾ?????ನಲ್ಲಿ ಅವಶ್ಯಕ ತಿದ್ದುಪಡಿಗಳು ಆಗಿದ್ದು, ಇನ್ನೂ 400 ವಿದ್ಯಾರ್ಥಿಗಳ ತಿದ್ದುಪಡಿ ಆಗಬೇಕಿದೆ ಎಂದು ಹೇಳಿದರು.

ಆಧಾರ್ ತಿದ್ದುಪಡಿ ಸಿಬ್ಬಂದಿ ಕಿಶೋರ್ ಕುಮಾರ ಅವರನ್ನು ಸನ್ಮಾನಿಸಲಾಯಿತು. ಅಂಚೆ ಇಲಾಖೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಗಲಾ ಭಾಗವತ್, ಕೃಷಿ ಇಲಾಖೆಯ ಉಪ ನಿರ್ದೇಶಕಿ ಆರತಿ ಪಾಟೀಲ, ವಂಶಿ, ಅಜಾಮ್ ಇದ್ದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು



ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

# ನಿಧಾನಿಸಿ!

## ಸುರಕ್ಷತೆಗಾಗಿ ವೇಗದ ಮಿತಿಯನ್ನು ಅನುಸರಿಸಿ







ಡಾ|| ಜಿ. ಗುರುರಾಜ್
ರಸ್ತೆ ಸುರಕ್ಷತೆ ಸಲಹೆಗಾರರು, ನಿರ್ದೇಶಕರು (ನಿವೃತ್ತ) NIMHANS

### ಈ ಕೆಳಕಂಡ ಅಂಕಿ-ಅಂಶಗಳಿಗೆ ಕರ್ನಾಟಕವು ಸಾಕ್ಷಿಯಾಗಿದೆ

- 2022ರಲ್ಲಿ ಭಾರತದಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ರಾಜ್ಯವು 8.6%ರಷ್ಟು ಮರಣ ಪ್ರಮಾಣ ದಾಖಲಿಸಿದೆ.
- 2021ರಲ್ಲಿ ಹೋಲಿಸಿದರೆ 2022ರಲ್ಲಿ ಮರಣ ಪ್ರಮಾಣದಲ್ಲಿ 17%ರಷ್ಟು ಮತ್ತು ಗಾಯಾಳುಗಳ ಪ್ರಮಾಣದಲ್ಲಿ 18%ರಷ್ಟು ರಾಜ್ಯದಲ್ಲಿ ಏರಿಕೆಯಾಗಿದೆ.
- 2022ರಲ್ಲಿ ರಾಜ್ಯದಲ್ಲಿ 93% ರಷ್ಟು ಅಪಘಾತ ಮರಣಗಳು ಮತ್ತು 91%ರಷ್ಟು ಗಾಯಗಳು ಉಂಟಾಗಲು ಅತೀ ವೇಗದ ಚಾಲನೆ ಕಾರಣವಾಗಿರುತ್ತದೆ.

* ಕೃಪೆ ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ 2021,2022 ರ ವರದಿ.
ಕರ್ನಾಟಕ ರಾಜ್ಯ ಪೊಲೀಸ್ ವರದಿ : 2023

ವಾಹನಗಳ ಅತೀ ವೇಗದ ಚಾಲನೆಗೆ ಮೋಟಾರು ವಾಹನ ಕಾಯಿದೆ 1988ರ ಕಲಂ 183 ಅಡಿಯಲ್ಲಿ ದಂಡವನ್ನು ವಿಧಿಸಬಹುದಾಗಿರುತ್ತದೆ.



ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ರವರು ಇಲಾಖಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಂದರ್ಭ

## ನಿಮ್ಮ ವೇಗದಲ್ಲಾಗೋ ಸ್ವಲ್ಪವೇ ವ್ಯತ್ಯಾಸ, ಅಪಘಾತ ಆಗೋದನ್ನು ಅದರ ತೀವ್ರತೆಯನ್ನು ಹಾಗೂ ನಿಮ್ಮ ಸಾವು ಬದುಕನ್ನು ನಿರ್ಧರಿಸುತ್ತದೆ.

**ರಸ್ತೆ ಸುರಕ್ಷತೆ - ನಮ್ಮ ಆದ್ಯತೆ**

ಡಾ|| ಎನ್.ವಿ. ಪ್ರಸಾದ್ ಐ.ಎ.ಎಸ್.
ಕಾರ್ಯದರ್ಶಿಗಳು
ಸಾರಿಗೆ ಇಲಾಖೆ

ಶ್ರೀ ಎ.ಎಂ. ಯೋಗೀಶ್ ಐ.ಎ.ಎಸ್.
ಆಯುಕ್ತರು
ಸಾರಿಗೆ ಮತ್ತು ರಸ್ತೆ ಸುರಕ್ಷತೆ

ಶ್ರೀ ಜಿ. ಪುರುಷೋತ್ತಮ್
ಅಪರ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಗಡಿಭಾಗದ ಹಾಗೂ ವಿಶೇಷ ಮಾಧ್ಯಮ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು